# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:251 • ನೋಂದಣಿ ನಂ.:KARKAN27911 • ವಿಜಯನಗರ • 01.03.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:251 • Reg.No:KARKAN27911 • VIJAYANAGARA • 01.03.2024 • Friday • Page:04 • Rs:2







## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**01–03–2024 – ಶುಕ್ರವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಸ್ವಾತಿ |
| ಯೋಗ | : ಧೃವ |
| ಕರಣ | : ಗರಜ |
| ಸೂರ್ಯೋದಯ | : 06:49:32 |
| ಸೂರ್ಯಾಸ್ತ | : 18:29:04 |
| ರಾಹು | : 11:12–12:39 |
| ಯಮಘಂಡ | : 15:34–17:02 |
| ಗುಳಿಕ | : 08:17–09:44 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ: 29–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.78 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 886 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 8.546 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 00 ಅಡಿ |
| ಒಳ ಹರಿವು | 00 ಕ್ಯೂಸೆಕ್ |
| ಹೊರ ಹರಿವು | 00 ಕ್ಯೂಸೆಕ್ |
| ಸಾಮರ್ಥ್ಯ | 00 ಟಿಎಂಸಿ |

# ಶಾಸಕರು ಮಂತ್ರಿಗಳು ಜನಸೇವಕರೇ ಹೊರತು, ರಾಜರೆಂದು ಭಾವಿಸಬಾರದು

## ಕರ್ನಾಟಕ ಬಂಜಾರ ಸೇವಾ ಸಂಘದ ರಾಜ್ಯಾಧ್ಯಕ್ಷೆ ಬಿ.ಟಿ. ಲಲಿತಾ ನಾಯ್ಕ ಹೇಳಿಕೆ

## ಶ್ರೀಸಂತ ಸೇವಾಲಾಲ್ ಮಹಾರಾಜರ ಜಯಂತ್ಯುತ್ಸವ, ಜಾಗೃತಿ ಸಮಾವೇಶಕ್ಕೆ ಚಾಲನೆ







■ **ಹಂಪಿ ಟೈಮ್ಸ್ ಹೊಸಪೇಟೆ**

ಮಾನವನಲ್ಲಿರುವ ಮೃಗತ್ವವನ್ನು ಬದಿಗಿಟ್ಟು ಮನುಷ್ಯತ್ವ ಬೆಳೆಸಿಕೊಂಡಾಗ: ಈ ಜಗತ್ತು ಸುಂದರವಾಗಿ ಕಾಣುತ್ತದೆ. ಹಾಗಾಗಿ ನಾವು ಉತ್ತಮ ದೇಶ ನಿರ್ಮಾಣಕ್ಕಾಗಿ ಗೌತಮ ಬುದ್ಧ, ವಿಶ್ವಗುರು ಬಸವಣ್ಣ, ಶ್ರೀಸೇವಾಲಾಲ್ ಮಹಾರಾಜ್ ಮತ್ತು ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕು ಎಂದು ಮಾಜಿ ಸಚಿವರು ಹಾಗೂ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ರಾಜ್ಯಾಧ್ಯಕ್ಷೆ ಬಿ.ಟಿ. ಲಲಿತಾ ನಾಯ್ಕ ಹೇಳಿದರು.

ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ವಿಜಯನಗರ ಜಿಲ್ಲಾ ಘಟಕ ಹಾಗೂ ತಾಂಡಾ ಅಭಿವೃದ್ಧಿ ನಿಗಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಒಳಾಂಗಣ ಕ್ರೀಡಾಂಗಣದ ಸಭಾಂಗಣದಲ್ಲಿ ಗುರುವಾರ ನಡೆದ ಶ್ರೀಸಂತ ಸೇವಾಲಾಲ್ ಮಹಾರಾಜರ 285ನೇ ಜಯಂತ್ಯುತ್ಸವ ಹಾಗೂ ಬಂಜಾರ (ಲಂಬಾಣಿ) ಸಮಾಜದ ಜಾಗೃತಿ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶ್ರೀ ಸೇವಾಲಾಲ್ ಅವರು ಬಂಜಾರರ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ಮುನ್ನಡೆಯುತ್ತಿದ್ದೇವೆ. ಬಂಜಾರ ಸಮಾಜ ಎಲ್ಲಾ ರಂಗಗಳಲ್ಲಿ ಮುಂದುವರೆಯಲು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದ ಕೃಪೆಯೂ ಇದೆ. ಹಾಗಾಗಿ ನಾವು ಶ್ರೀಸೇವಾಲಾಲ್ ಅವರಷ್ಟೇ, ಬಾಬಾ ಸಾಹೇಬ್ ಅವರಿಗೂ ಗೌರವ, ಪೂಜ್ಯ ಭಾವನೆಯಿಂದ ಕಾಣುತ್ತೇವೆ ಎಂದರು.

ವಿಧಾನಸೌಧದಲ್ಲಿ ರಾಜ್ಯಸಭೆ ಚುನಾವಣೆಯಲ್ಲಿ ನಾಸೀರ್ ಹುಸೇನ್ ಅವರು ಗೆಲುವು ಸಾಧಿಸಿದಾಗ ಅವರ ಬೆಂಬಲಿಗರು, ನಾಸೀರ್ ಹುಸೇನ್ ಜಿಂದಾಬಾದ್ ಎಂದು ಘೋಷಣೆ ಕೂಗಿರುವುದನ್ನೇ ಮಾಧ್ಯಮಗಳು ತಿರುಚಿವೇ; ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿವೇ ಎಂದು ಮಾಧ್ಯಮಗಳು ಸಣ್ಣತನ ತೋರ್ಪಡಿಸಿವೆ. ಕೆಲವರು ಮನೆ ಮೂರುಕರು ಎಲ್ಲೆಡೆ ಇರುತ್ತಾರೆ. ಮೂರುಕತ ಎಲ್ಲೆಡೆಯೂ ಇದೆ. ದೇಶ ಮುರಿಯುವ ಕೆಲಸವೂ ಮಾಡುತ್ತಾರೆ. ಆದರೆ, ನಾವು ದೇಶ ಕಟ್ಟುವ ಕೆಲಸ ಮಾಡಬೇಕು. ಕಟ್ಟುವೇವು ನಾವು, ಕಟ್ಟೇ ಕಟ್ಟುತ್ತೇವೆ ಎಂದು ಸಾಮರಸ್ಯದೊಂದಿಗೆ ಮುನ್ನಡೆಯಬೇಕು ಎಂದು ಹೇಳಿದರು.

ವಿಶ್ವಗುರು ಬಸವಣ್ಣನವರು ಪ್ರಸಾದದ ಮಹತ್ವ ಸಾರಿದ್ದಾರೆ. ಕಾಯಕದ ಮಹತ್ವ ತಿಳಿಸಿದ್ದಾರೆ. ಹಾಗೆಯೇ ಶ್ರೀಸೇವಾಲಾಲ್ ಅವರು ಕೂಡ ಕಾಯಕದಿಂದ ಬದುಕು ಕಟ್ಟಿಕೊಳ್ಳುವುದನ್ನು ತಿಳಿಯಪಡಿಸಿದ್ದಾರೆ. ನಾವು ಬರೀ ಪೂಜೆಗೆ ಸೀಮಿತಗೊಳ್ಳದೇ ಭಕ್ತಿಯ ಜೊತೆಗೆ ಜೊತೆಗೆ ಕಾಯಕವನ್ನು ಮಾಡಬೇಕು. ಕಾಯಕದಿಂದ ದೇಶ ಉದ್ಧಾರವಾಗಲಿದೆ. ಬರೀ ಪೂಜೆಯಿಂದ ದೇಶ ಉದ್ಧಾರ ಆಗಲ್ಲ ಎಂಬುದನ್ನು ಮನಗಾಣಬೇಕು ಎಂದು ಹೇಳಿದರು.

ಈ ಭಾಗದಲ್ಲಿ ಗುಳೆ ಹೋಗುವವರ ಮಕ್ಕಳಿಗಾಗಿ ಶ್ರೀ ಶಿವಪ್ರಕಾಶ ಮಹಾರಾಜ ಅವರು ಹಾಸ್ಟೆಲ್ ನಿರ್ಮಾಣ ಮಾಡುತ್ತೇವೆ ಎಂದು ಹೊರಟಿದ್ದಾರೆ. ಇದು ಉತ್ತಮ ಕಾರ್ಯವಾಗಿದೆ. ನಾವು ಮಕ್ಕಳಿಗೆ ಶಿಕ್ಷಣ ನೀಡಿದಾಗ ಮಾತ್ರ ದೇಶ ಉದ್ಧಾರ ಆಗಲು ಸಾಧ್ಯ. ದಾವಣಗೆರೆಯ ಸೂರಗೊಂಡನಕೊಪ್ಪದಲ್ಲಿ ಬರೀ ಪೂಜಾರಿಗಳೇ ಹೆಚ್ಚಾಗಿದ್ದಾರೆ. ಭಕ್ತಿಯ ಜೊತೆಗೆ ವಿದ್ಯೆಯೂ ದೊರೆಯಬೇಕು. ಈ ಕಾರ್ಯವನ್ನು ನಾವು ಮಾಡಬೇಕು ಎಂದರು.

ರೈತರ ಮಕ್ಕಳಿಗೆ ಹೆಣ್ಣು ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಕೃಷಿಕರಿಗೂ ಮಹತ್ವ ನೀಡುವ ಕೆಲಸ ಆಗಬೇಕು. ಈ ಜಗತ್ತಿನಲ್ಲಿ ಎಲ್ಲರೂ ಸಮಾನರು ಎಂದು ಮಹನೀಯರು ಸಾರಿದ್ದಾರೆ. ಇದನ್ನು ಅರ್ಥ ಮಾಡಿಕೊಂಡು ಮುನ್ನಡೆಯಬೇಕು ಎಂದರು.

ಶಾಸಕರು, ಮಂತ್ರಿಗಳು ಜನ ಸೇವಕರಾಗಿದ್ದಾರೆ. ಇವರು ರಾಜರು ಎಂದು ಭಾವಿಸಿಕೊಳ್ಳಬಾರದು. ದಿನದ 24 ತಾಸೂ ಕೆಲಸ ಮಾಡಬೇಕು. ಗೆದ್ದ ಬಳಿಕ ಜನರ ಕೆಲಸ ಮಾಡದೇ ಹೋದರೆ ಅವರು ಶಾಸಕರು, ಮಂತ್ರಿಗಳು ಎನಿಸಿಕೊಳ್ಳಲ್ಲ. ಜನ ಕಲ್ಯಾಣವೇ ಜನಪ್ರತಿನಿಧಿಗಳಿಗೆ ಮುಖ್ಯ ಎಂದು ಹೇಳಿದರು.

ಕೊಟ್ಟೂರಿನ ಬಂಜಾರ ಶ್ರೀಪೀಠದ ಶ್ರೀ ಶಿವಪ್ರಕಾಶ ಮಹಾರಾಜ, ರಾಮಕೃಷ್ಣ ಆಶ್ರಮ ರಾರಾಳ ತಾಂಡಾದ ಶ್ರೀ ವಿಷ್ಣುಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಂಘದ ಜಿಲ್ಲಾಧ್ಯಕ್ಷ ಡಿ. ಲಾಲ್ಯಾನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಬರಹಗಾರರ ಸಂಘದ ಅಧ್ಯಕ್ಷ ಮಧುನಾಯ್ಕ ಲಂಬಾಣಿ ಶ್ರೀಸೇವಾಲಾಲ್ ಮಹಾರಾಜರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಗಾಯಕರಾದ ಸಾವಿತ್ರಿಬಾಯಿ, ಉಮೇಶ್ ನಾಯ್ಕ, ವಾಲ್ಯಾ ನಾಯ್ಕ, ಯಲ್ಲಪ್ಪ ಭಂಡಾರಧಾರ್, ಮುಖಂಡರಾದ ಡಿ. ವೆಂಕಟರಮಣ, ಪಂಪಾಪತಿ, ರಾಮಜೀ ನಾಯ್ಕ, ಕುಮಾರ ನಾಯ್ಕ, ಹನುಮನಾಯ್ಕ, ಹೀರ್ಯಾ ನಾಯ್ಕ, ರಾಮ ನಾಯ್ಕ, ಗಜಾನಂದ ನಾಯ್ಕ, ಪೂಜಾರಿ ಗೋವಿಂದ ನಾಯ್ಕ ಮತ್ತಿತರರಿದ್ದರು. ಶಿಕ್ಷಕರಾದ ಎಲ್. ಹಾಲ್ಯಾ ನಾಯ್ಕ, ನಾಗರತ್ನಮ್ಮ ನಿರ್ವಹಿಸಿದರು.

ನಗರದ ಸಣ್ಣಕ್ಕಿ ವೀರಭದ್ರೇಶ್ವರ ದೇಗುಲದಿಂದ ಶ್ರೀಸೇವಾಲಾಲ್ ಮಹಾರಾಜರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಬಂಜಾರ ಹಾಡುಗಳಿಗೆ ಯುವಕರು, ಯುವತಿಯರು ಕುಣಿದು ಕುಪ್ಪಳಿಸಿದರು. ಉಟೇ, ಉಟೇ ಸುಶೀಲಾ ಬೋಡಿ, ನಾಚರಿಚ ಘೋರಿ ನಾಚರಿಚ ಸೇರಿದಂತೆ ಸೇವಾಲಾಲ್ ಮಹಾರಾಜರ ಕುರಿತ ಹಾಡುಗಳಿಗೆ ಹೆಜ್ಜೆ ಹಾಕಿದರು. ಗೌರಿ ಸಸಿಯೊಂದಿಗೆ ಯುವತಿಯರು ಮೆರವಣಿಗೆಯಲ್ಲಿ ಸಾಗಿದರು.

## ಕನಕಗಿರಿ ಉತ್ಸವ: ಆಕರ್ಷಕ ಮಲ್ಲಕಂಬ ಪ್ರದರ್ಶನ



**ಹಂಪಿ ಟೈಮ್ಸ್ ಕೊಪ್ಪಳ**

ಕನಕಗಿರಿ ಉತ್ಸವ–2024ರ ಅಂಗವಾಗಿ ಕನಕಗಿರಿಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಬುಧವಾರ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹಳೆ ಆಲೂರಿನ ಜ್ಞಾನ ಸಿಂಧು ಅಂದ ಮಕ್ಕಳ ವಸತಿ ಶಾಲೆಯ ವಿಕಲಚೇತನ ಮಕ್ಕಳು ಆಕರ್ಷಕ ಮಲ್ಲಕಂಬ ಪ್ರದರ್ಶನ ಮಾಡಿದರು.

ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ವಂಟಗೋಡಿ ಅವರು ಮಲ್ಲಕಂಬ ಪ್ರದರ್ಶನ ನೀಡಿದ ಅಂದ ಮಕ್ಕಳ ಸಹಾಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ, ಕನಕಗಿರಿ ತಹಶೀಲ್ದಾರರಾದ ವಿಶ್ವನಾಥ ಮುರಡಿ, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವ ಹಣಾಧಿಕಾರಿಗಳಾದ ಚಂದ್ರಶೇಖರ ಕಂದಕೂರ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಯುವಕರು ಸಾರ್ವಜನಿಕರು ಅತ್ಯಂತ ಉತ್ಸಾಹದಿಂದ ಮಲ್ಲಕಂಬ ಪ್ರದರ್ಶನ ವೀಕ್ಷಿಸಿ, ಮಕ್ಕಳಿಗೆ ಪ್ರೋತ್ಸಾಹಿಸಿದರು.

## ನಕಲಿ ಕಾರ್ಮಿಕ ಕಾರ್ಡ್‌ಗಳ ರದ್ಧತಿಯ ಪ್ರಚಾರಕ್ಕೆ ಚಾಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಾರ್ಮಿಕ ಇಲಾಖೆ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮಾಹಿತಿ ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಗಳಡಿಯಲ್ಲಿ ಕಾರ್ಮಿಕ ಇಲಾಖೆ ಮತ್ತು ಮಂಡಳಿಯ ಕಾರ್ಯಕ್ರಮಗಳು, ಯೋಜನೆಗಳು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ ಮಂಡಳಿಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳು ಮತ್ತು ನಕಲಿ ಕಾರ್ಮಿಕ ಕಾರ್ಡ್‌ಗಳನ್ನು ರದ್ದು ಮಾಡಲು ಜಿಲ್ಲ್ಯಾದ್ಯಂತ ಮಾರ್ಚ 7ರವರೆಗೆ ನಡೆಯುವ ಪ್ರಚಾರ ಕಾರ್ಯಕ್ರಮಕ್ಕೆ ಹೊಸಪೇಟೆಯ ಉಪವಿಭಾಗದ ಕಾರ್ಮಿಕ ಅಧಿಕಾರಿಯವರ ಕಚೇರಿಯ ಮುಂಭಾಗದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡಂಬರಮತ್ತೂರ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಟ್ಟಡ ಕಾರ್ಮಿಕರಲ್ಲದವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೋಗಸ್ ಕಾರ್ಡ್ ಪಡೆದು ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿರುವುದು ಅಕ್ಷಮ್ಯ ಅಪರಾಧವಾಗಿರುತ್ತದೆ. ಇಂತಹ ನಕಲಿ ಕಾರ್ಡಗಳನ್ನು ಹೊಂದಿದಂತವರು ಹತ್ತಿರದ ಕಾರ್ಮಿಕ ನಿರೀಕ್ಷಕರ ಕಚೇರಿಗಳಿಗೆ ಹಸ್ತಾಂತರಿಸಿ ತಮ್ಮ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಮಾನಗಳಲ್ಲಿ ಕಾನೂನು ಕ್ರಮ ಮತ್ತು ಶಿಕ್ಷೆ ಎದುರಿಸಬೇಕಾಗಿರುತ್ತದೆ ಎಂದು ಹೇಳಿದರು.

ಹೊಸಪೇಟೆ 2ನೇ ವೃತ್ತದ ಕಾರ್ಮಿಕ ನಿರೀಕ್ಷಕರಾದ ಎಂ.ಅಶೋಕ, ಹೂವಿನಹಡಗಲಿ ವೃತ್ತದ ಕಾರ್ಮಿಕ ನಿರೀಕ್ಷಕರಾದ ಮೌನೇಶ್, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ಎಕ್ಸಿಕ್ಯೂಟಿವ್ ಆದ ಪೂಜಾರಿ ತುರುಮಂದೆಪ್ಪ ಹಾಗೂ ಇತರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**



ವಿಜಯನಗರ ಜಿಲ್ಲೆಯಾದ್ಯಂತ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಮಾರ್ಚ್ 1 ರಿಂದ 18 ಕೇಂದ್ರಗಳಲ್ಲಿ ಆರಂಭವಾಗಲಿವೆ ಎಂದು ವಿಜಯನಗರ ಜಿಲ್ಲಾ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ನೋಡಲ್ ಅಧಿಕಾರಿ ನಾಗರಾಜ್ ಹವಾಲ್ದಾರ್ ತಿಳಿಸಿದ್ದಾರೆ.

ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಅಂದಾಜು 16 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದು ಸುಗಮವಾಗಿ ಪರೀಕ್ಷೆ ನಡೆಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಿಂದ ನೂರು ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದ್ದು ಈ ವ್ಯಾಪ್ತಿಯಲ್ಲಿ ಪರೀಕ್ಷಾ ಸಂದರ್ಭದಲ್ಲಿ ಯಾವುದೇ ಜೆರಾಕ್ಸ ಅಂಗಡಿಗಳು ಹಾಗೂ ಮುದ್ರಣ ಯಂತ್ರಗಳ ಅಂಗಡಿಗಳನ್ನು ತೆರೆಯುವಂತಿಲ್ಲ. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಪೋಲೀಸ್ ಸಿಬ್ಬಂದಿ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಪರೀಕ್ಷಾ ಕೇಂದ್ರಗಳಲ್ಲಿ ಉಪಸ್ಥಿತರಿರುತ್ತಾರೆ. ಕಟ್ಟುನಿಟ್ಟಾಗಿ ಪರೀಕ್ಷೆಗಳನ್ನು ನಡೆಸಲು ಬೇರೆ ಜಿಲ್ಲೆಗಳಿಂದ ವಿಶೇಷ ಜಾಗೃತ ದಳದ ಸಿಬ್ಬಂದಿಯನ್ನು ನೇಮಿಸಲಾಗಿದೆ ಹಾಗೂ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಜೊತೆಗೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳನ್ನು ವೀಕ್ಷಕರಾಗಿ .ಜಿಲ್ಲಾಧಿಕಾರಿಗಳು ನೇಮಿಸಿದ್ದು ಅವರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷೆಗಳ ಸುಗಮ ನಿರ್ವಹಣೆಯ ಕುರಿತು ವರದಿ ನೀಡಲಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಯಾವುದೇ ಆತಂಕಕ್ಕೆ ಒಳಗಾಗದೇ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಿ ಯಶಸ್ಸು ಗಳಿಸಿ ಜಿಲ್ಲೆಯ ಫಲಿತಾಂಶವನ್ನು ಉತ್ತಮಗೊಳಿಸುವ ಆಶಯವನ್ನು ನಾಗರಾಜ್ ಹವಾಲ್ದಾರ್ ವ್ಯಕ್ತಪಡಿಸಿದ್ದಾರೆ.

## ವಿವಿಧ ತಾಂತ್ರಿಕ ಕೌಶಲ ತರಬೇತಿಗೆಅರ್ಜಿಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2023–24 ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳ ವತಿಯಿಂದ ವಿವಿಧ ತಾಂತ್ರಿಕ ಕೌಶಲ ತರಬೇತಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮರಿಯಮ್ಮನಹಳ್ಳಿಯಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿ.ಟಿ.ಮತ್ತು ಟಿ.ಸಿ.) ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳ ವತಿಯಿಂದ ನೀಡಲಾಗುತ್ತಿರುವ ವಿವಿಧ ಅಲ್ಪಾವದಿ ತರಬೇತಿಗಳಾದ ಸಿಎನ್‌ಸಿ ಪ್ರೋಗ್ರಾಮರ್, ಸಿ. ಎನ್.ಸಿ. ಆಪರೇಟರ್, ಸಿ.ಎನ್.ಸಿ. ಅಪರೇಟರ್ ಮಷಿನ್, ಕನ್ವೇಷನಲ್ ಟರ್ನರ್– ಮಿಲ್ಲರ್, ಫಿಟ್ಟರ್ ಮೆಕಾನಿಕಲ್ ಅಸೆಂಬ್ಲಿ, ಡಿಸೈನರ್ ಮೆಕಾನಿಕಲ್, ರೋಬೋಟಿಕ್ ಟೆಕ್ನಿಷಿಯನ್, ವೆಲ್ಡರ್, ಎಲೆಕ್ಟ್ರಿಕಲ್ ಟೆಕ್ನಿಷಿಯನ್, ಎಲೆಕ್ಟ್ರಾನಿಕ್ಸ್ ಟೆಕ್ನಿಷಿಯನ್, ನೀಡ್ ಬೇಸಿಕ್ ಟ್ರೈನಿಂಗ್ ಪ್ರೋಗ್ರಾಮರ್ ಕೋರ್ಸಗಳಿಗೆ ತರಬೇತಿ ನೀಡಲಾಗುತ್ತಿದ್ದು.

ಎಸ್.ಎಸ್.ಎಲ್.ಸಿ. ಪಾಸಾದ ಐಟಿಐ ಪಾಸ್ ಫೇಲ್, ಡಿಪ್ಲೋಮ ಪಾಸ್/ಫೇಲ್ ಮತ್ತು ಬಿ.ಇ. ಓದುತ್ತಿರುವ ಪಾಸಾದ ವಿದ್ಯಾರ್ಥಿಗಳು https://dom.karnataka.gov.in ಈ ಲಿಂಕ್ ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ 1 ಕೊನೆಯ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, (ಜಿ.ಟಿ.ಮತ್ತು ಟಿ.ಸಿ.) ಹೊಸಪೇಟೆ, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ, 8722999929, 7795969915ಗೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್ HAMPI TIMES

## ವಚನ ಅರಿವು

### ಒಲುಮೆ

**ಒಲಿದವರ ಕೊಲುವಡೆ ಮಸೆದ ಕೂರಲಗೇಕೆ?**
**ಅವರನೊಲ್ಲೆನೆಂದಡೆ ಸಾಲದೆ?**
**ಮಹಾಲಿಂಗ ಗಜೇಶ್ವರನ ಶರಣರನಗಲಿದಡೆ**
**ತುಪ್ಪದಲ್ಲಿ ಕಿಚ್ಚ ನಂದಿಸಿದಂತಾದೆನವ್ವಾ!**

**– ಗಜೇಶ ಮಸಣಯ್ಯ**

ಸೂಕ್ಷ್ಮವಾದ ವಚನ ಗಜೇಶ ಮಸಣಯ್ಯನದು. ತುಂಬ ನಂಬಿರುವವರನ್ನು ಅಥವ ಪ್ರೀತಿಸುವವರನ್ನು ಕಳೆದುಕೊಳ್ಳಬಾರದು. ಅಂದರೆ ಅವರಿಗೆ ದ್ರೋಹ, ಮೋಸ, ವಂಚನೆ ಮಾಡಿದರೆ ಅವರನ್ನು ಕೊಂದಂತೆ ಆಗುತ್ತದೆ. ನಮ್ಮನ್ನು ನಂಬಿದವರನ್ನು ಕೊಲ್ಲಬೇಕೆಂದರೆ ಮಸೆದು ಹರಿತ ಮಾಡಿದ ಕತ್ತಿಯಿಂದ ಕೊಲ್ಲಬೇಕಿಲ್ಲ. ಅವರನ್ನು ನಿರಾಕರಿಸಿದರೆ, ದೂರ ಮಾಡಿದರೆ ಸಾಕು ಅವರನ್ನು ಕೊಂದಂತೆಯೆ ಸರಿ. ನಮ್ಮ ಬದುಕಿಗೆ ಬೆಳಕಾದವರನ್ನು ಕಳೆದುಕೊಳ್ಳಬಾರದು. ನಮ್ಮನ್ನು ನಂಬಿದವರ ವಿಶ್ವಾಸಕ್ಕೆ ದಕ್ಕೆ ಮಾಡದೆ, ದ್ರೋಹ ಮಾಡದೆ ಇದ್ದರೆ ಅದೇ ನಿಜವಾದ ಮಾನವೀಯತೆ. ನಮ್ಮ ಬದುಕಿಗೆ ದಾರಿ ಬೆಳಕಾದ, ಒಳ್ಳೆಯ ನಡೆನುಡಿಯನ್ನು ತೋರಿದ ಶರಣತತ್ವ, ಶರಣರ ಸಂಗದಿಂದ ದೂರವಾದರೆ ತುಪ್ಪದಲ್ಲಿ ಬೆಂಕಿ ಆರಿಸಿದಂತಾಗುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಸೋಲೊಪ್ಪಿಕೊಳ್ಳುವುದ ಕಲಿಯಿರಿ

ಆತ ಅತ್ಯಂತ ಜಾಣ ಹುಡುಗ. ಪರೀಕ್ಷೆಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ತೆಗೆದುಕೊಳ್ಳುವುದು ಆತನಿಗೆ ನೀರು ಕುಡಿದಷ್ಟೇ ಸಲೀಸಾಗಿತ್ತು. ಮುಂದೆ ಉನ್ನತ ವಿದ್ಯಾಭ್ಯಾಸಕ್ಕೆ ಐಐಟಿಗೆ ಆಯ್ಕೆಯಾದ ಆತ ಅಲ್ಲಿಯೂ ಕೂಡ ಅತ್ಯುನ್ನತ ಅಂಕಗಳನ್ನು ಗಳಿಸಿದ.

ನಂತರ ಎಂಬಿಎ ಮಾಡಲು ಅಮೆರಿಕಾದ ಪ್ರತಿಷ್ಠಿತ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ತನ್ನ ಮೆರಿಟ್ ಆಧಾರದ ಮೇಲೆ ದಾಖಲಾದನು. ಅಲ್ಲಿಯೂ ಕೂಡ ಅತ್ಯಂತ ಒಳ್ಳೆಯ ಅಂಕಗಳನ್ನು ಪಡೆದ ಆತ ಅಮೆರಿಕದಲ್ಲಿಯೇ ಒಳ್ಳೆಯ ನೌಕರಿ ಗಿಟ್ಟಿಸಿದನು.

ಮುಂದೆ ಆತನ ಪಾಲಕರು ಆತನಿಗೆ ವಿವಾಹ ಮಾಡಿದರು. ಪತ್ನಿಯೊಂದಿಗೆ ಅಮೆರಿಕದಲ್ಲಿಯೇ ಸೆಟ್ಲ್ ಆದ ಆ ವ್ಯಕ್ತಿ ತನ್ನ ಉದ್ಯೋಗದಲ್ಲಿ ಬಡ್ತಿ ಪಡೆಯುತ್ತಾ ಯಶಸ್ಸಿನ ಉತ್ತುಂಗದಲ್ಲಿ ತೇಲುತ್ತಿದ್ದ. 5 ಕೋಣೆಗಳ ಅತಿ ದೊಡ್ಡ ಮನೆಯನ್ನು, ಐಷಾರಾಮಿ ಕಾರನ್ನು ಖರೀದಿಸಿದ ಆತ ಮನೆಯಲ್ಲೆಲ್ಲಾ ಒಳ್ಳೆಯ ಪೀಠೋಪಕರಣಗಳನ್ನು ಹೊಂದಿದ್ದನು.

> **ಜೀವನದ ಅವಶ್ಯಕತೆಗಳನ್ನು ಪೂರೈಸಲು ಹಣ ಬೇಕಾಗುತ್ತದೆ ನಿಜ ಆದರೆ ಹಣ ಸಂಪಾದನೆಯೇ ಜೀವನದ ಅಂತಿಮ ಉದ್ದೇಶ ಅಲ್ಲ. ಅತ್ಯಂತ ಕಡಿಮೆ ಸಂಪಾದನೆಯಲ್ಲಿಯೂ ಸುಖವಾಗಿರುವ ಜನರಿದ್ದಾರೆ ಮತ್ತು ಐಶಾರಾಮಿ ಜೀವನ ನಡೆಸುವವರು ದುಃಖದಿಂದಿರಬಹುದು. ಕೌಟುಂಬಿಕ ವಾಗಿಯಂತೂ ಮನುಷ್ಯ ಸೋತು ಗೆಲ್ಲಲೇಬೇಕು.**

ಭವ್ಯವಾದ ಮನೆ, ಐಶಾರಾಮಿ ಕಾರು, ಮುದ್ದಿನ ಮಡದಿ ಮತ್ತು ಮೂರು ಮಕ್ಕಳು ಸ್ವರ್ಗಕ್ಕೆ ಕಿಚ್ಚು ಹಚ್ಚಲು ಇನ್ನೇನು ಬೇಕು ಎನ್ನುವಂತಿದ್ದ ಜೀವನ ಶೈಲಿ. ಆದರೆ ಒಂದು ದಿನ ತನ್ನ ಪತ್ನಿ ಮತ್ತು ಮೂವರು ಮಕ್ಕಳನ್ನು ಶೂಟ್ ಮಾಡಿ ಸಾಯಿಸಿದ ಆ ವ್ಯಕ್ತಿ ತಾನು ಕೂಡ ಗುಂಡಿಟ್ಟುಕೊಂಡು ಸತ್ತಿದ್ದ.

ಕಾರಣ ಮಾತ್ರ ಯಾರಿಗೂ ಗೊತ್ತಾಗಲಿಲ್ಲ. ಆದರೆ ಅಮೆರಿಕದ ಕ್ಯಾಲಿಫೋರ್ನಿಯಾ ಯುನಿವರ್ಸಿಟಿಯ ಕ್ಲಿನಿಕಲ್ ಸೈಕಾಲಜಿ ವಿಭಾಗದ ತಜ್ಞರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಈ ಕುರಿತು ತನಿಖೆಯನ್ನು ಕೈಗೊಂಡರು. ತನಿಖೆಯ ಅಂಗವಾಗಿ ಆತನ ಹಲವಾರು ಸ್ನೇಹಿತರು ಮತ್ತು ಸಹೋದ್ಯೋಗಿಗಳನ್ನು ವಿಚಾರಣೆ ಮಾಡಲಾಗಿ ಬೆಳಕಿಗೆ ಬಂದದ್ದು ಇಷ್ಟು...

ಕೆಲ ಸಮಯದ ಹಿಂದೆ ಆತ ತನ್ನ ಉದ್ಯೋಗವನ್ನು ಕಳೆದುಕೊಂಡಿದ್ದು ಬಹಳ ದಿನಗಳವರೆಗೆ ಆತನಿಗೆ ಬೇರೊಂದು ಉದ್ಯೋಗ ದೊರೆಯಲಿಲ್ಲ. ನಂತರ ದೊರಕಿದ ಉದ್ಯೋಗದಲ್ಲಿ ಆತನಿಗೆ ಈ ಮೊದಲು ದೊರೆಯುತ್ತಿದ್ದ ಸಂಬಳದ ಅರ್ಧ ಭಾಗದಷ್ಟು ಕೂಡ ಹಣ ದೊರೆಯುತ್ತಿರಲಿಲ್ಲ. ಈಗಾಗಲೇ ಕಂತಿನಲ್ಲಿ ಖರೀದಿಸಿದ ಮನೆ, ಕಾರುಗಳ ಕಂತನ್ನು ತೀರಿಸಲಾಗದೆ ಅವು ಆತನ ಕೈ ಬಿಟ್ಟು ಹೋಗುವ ದಿನಗಳು ದೂರವಿರಲಿಲ್ಲ. ಇದರ ಮೇಲೆ ಮಕ್ಕಳ ಶಾಲೆಯ ಫೀಸು, ಮತ್ತಿತರ ಖರ್ಚುಗಳು ಆತನಿಗೆ ಗಾಯದ ಮೇಲೆ ಬರೆ ಎಳೆದಂತಾಗಿತ್ತು. ಇದೆಲ್ಲದರ ಪರಿಣಾಮವಾಗಿ ಆತ ಆತ್ಮಹತ್ಯೆಯ ನಿರ್ಧಾರಕ್ಕೆ ಬಂದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಚಿಕ್ಕಂದಿನಿಂದಲೂ ಯಶಸ್ಸನ್ನೇ ಕಾಣುತ್ತಾ ಬಂದಿದ್ದ ಆತನಿಗೆ ಸೋಲಿನ ರುಚಿ ತಿಳಿದಿರಲಿಲ್ಲ, ಸೋಲುವುದು ಅವಮಾನ ಎಂದು ಭಾವಿಸಿದ್ದ ಆತ ತನ್ನ ಬದುಕಿನಲ್ಲಿ ಉಂಟಾದ ಆಕಸ್ಮಿಕ ಅಧಃಪತನಕ್ಕೆ ತಯಾರಿರಲಿಲ್ಲ. ಇದಲ್ಲವೇ ದುರಂತ !!

ಏನೆಲ್ಲಾ ದೊಡ್ಡ ದೊಡ್ಡ ಡಿಗ್ರಿಗಳನ್ನು ಮುಡಿಗೇರಿಸಿಕೊಂಡಿದ್ದರು ಬದುಕಿನ ಏರಿಳಿತಗಳನ್ನು ಸಮನಾಗಿ ಸ್ವೀಕರಿಸುವ ಸ್ಥಿತ ಪ್ರಜ್ಞತೆ ಇಲ್ಲದೆ ಹೋದಾಗ ಇಂತಹ ವೈಪರೀತ್ಯಗಳು ಉಂಟಾಗುತ್ತವೆ.

ಕೆಲವು ವರ್ಷಗಳ ಹಿಂದೆ ನಮ್ಮ ಭಾರತದಲ್ಲಿಯೂ ಕೂಡ ಆರ್ಥಿಕ ಸ್ಥಿತಿ ಕುಸಿದು ಬಿದ್ದಾಗ ಹಲವಾರು ಜನ ಇಂಜಿನಿಯರಗಳು, ಸಾಫ್ಟ್ ವೇರ್ ಉದ್ಯೋಗಿಗಳು ಆತ್ಮಹತ್ಯೆ ಮಾಡಿಕೊಂಡರು. ಆತ್ಮಹತ್ಯೆ ಬದುಕಿನ ಘನತೆಯನ್ನು ಕುಗ್ಗಿಸುವ ಕೆಲಸ.

ಯಾರಾದರೂ ಕೂಲಿ ಕಾರ್ಮಿಕ, ಗಾರೆ ಕೆಲಸದ ವ್ಯಕ್ತಿ, ಮನೆ ಮನೆಗಳಲ್ಲಿ ಪಾತ್ರೆ , ಬಟ್ಟೆ ತೊಳೆಯುವ ಕೆಲಸ ಮಾಡುವವರು ದಿನಗೂಲಿ ನೌಕರರು ಎಂದಾದರೂ ಆತ್ಮಹತ್ಯೆ ಮಾಡಿಕೊಂಡದ್ದು ನೋಡಿದ್ದೀರಾ? ಬಹುತೇಕ ಇಲ್ಲ. ಇಂದು ತಮ್ಮನ್ನು ಕೆಲಸದಿಂದ ತೆಗೆದು ಹಾಕಿದರೂ ನಾಳೆಯ ದಿನ ಮತ್ತೊಂದೆಡೆ ಕೆಲಸ ಸಿಗಬಹುದು ಎಂಬ ಭರವಸೆ ಅವರನ್ನು ತಪ್ಪು ನಿರ್ಧಾರ ಕೈಗೊಳ್ಳಲು ಬಿಡುವುದಿಲ್ಲ. ತಮ್ಮ ಕಾಲುಗಳ ಬಲದ ಮೇಲೆ ನಂಬಿಕೆ ಇರುವ ಗಿಡದ ಮೇಲಿನ ಪಕ್ಷಿ ಇದ್ದಂತೆ ಅವರು. ಯಾವುದೇ ಔಪಚಾರಿಕ ವಿದ್ಯೆ ಅವರಿಗೆ ಇಲ್ಲದಿದ್ದರೂ ಪ್ರಾಪಂಚಿಕ ಜ್ಞಾನ, ತಿಳುವಳಿಕೆ ಹೊಂದಿರುವ ಅವರು ಬದುಕು ತಮ್ಮತ್ತ ಎಸೆಯುವ ಪ್ರತಿ ಸವಾಲುಗಳಿಗೆ ಉತ್ತರ ಹುಡುಕಬಲ್ಲರು.

ಖ್ಯಾತ ಹಾಸ್ಯ ಕಲಾವಿದ ಅಭಿನವ ಬೀಚಿ ಎಂದೇ ಹೆಸರಾದ ಪ್ರಾಣೇಶ್ ಅವರು ಒಂದೆಡೆ ಹೇಳುತ್ತಾರೆ ನಮ್ಮ ಹಳ್ಳಿ ಊರುಗಳಲ್ಲಿ, ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳು ಜೀವನದಲ್ಲಿ ಯಾವತ್ತೂ ಸವಾಲುಗಳಿಗೆ ಅಂಜುವುದಿಲ್ಲ... ಸವಾಲುಗಳನ್ನು ಎದುರಿಸುವ ಅವಕಾಶವನ್ನು ಬದುಕು ಅವರಿಗೆ ಒದಗಿಸಿಕೊಟ್ಟಿರುತ್ತದೆ ಎಂದು.

ಹಾಗಾದರೆ ವಿದ್ಯಾವಂತರು ತಪ್ಪುತ್ತಿರುವುದು ಎಲ್ಲಿ? ಇಂದಿನ ಜಗತ್ತು ಮುಖ ಮಾಡಿ ನಿಂತಿರುವುದು ಯಶಸ್ಸು ಮತ್ತು ಅದನ್ನು ಸಾಧಿಸುವ ಕಡೆ ಮಾತ್ರ. ಎಲ್ಲರೂ ಗೆಲ್ಲುವುದು ಹೇಗೆ ಎಂಬುದನ್ನು ಹೇಳಿಕೊಡುತ್ತಾರೆಯೇ ಹೊರತು ಸೋಲಿನ ಪಾಠಗಳನ್ನು ಸೋತ ನಂತರ ಹೇಗೆ ಮತ್ತೆ ಚೇತರಿಸಿಕೊಂಡು ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದನ್ನು ಹೇಳಿಕೊಡುವಲ್ಲಿ ವಿಫಲರಾಗುತ್ತಿದ್ದಾರೆ

ವ್ಯಕ್ತಿಯ ನಿಜವಾದ ಯಶಸ್ಸು ಆತ ತನ್ನ ದೌರ್ಬಲ್ಯಗಳನ್ನು ಮೆಟ್ಟಿನಿಂತು ಬದುಕನ್ನು ಸವಾಲಾಗಿ ಸ್ವೀಕರಿಸುವಲ್ಲಿ ಇದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಬದುಕಿನಲ್ಲಿ ಸೋಲುವುದು ತಪ್ಪಲ್ಲ, ಆದರೆ ಸೋತು ಆತ್ಮಹತ್ಯೆಗೆ ಶರಣಾಗುವುದು ಖಂಡಿತವಾಗಿಯೂ ತಪ್ಪು.



ಶಾಲೆಯ ಪಠ್ಯ ಪುಸ್ತಕಗಳ ಓದು ನಮಗೆ ಒಳ್ಳೆಯ ಉದ್ಯೋಗ ದೊರಕಿಸಿಕೊಡಲು, ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ ನಿಜ.... ಆದರೆ ಜೀವನದ ಸಮಸ್ಯೆಗಳನ್ನು ಎದುರಿಸಲು ವ್ಯಕ್ತಿ ಸಮಾಜದ ಭಾಗವಾಗಲೇಬೇಕು. ಜೀವನದ ಅವಶ್ಯಕತೆಗಳನ್ನು ಪೂರೈಸಲು ಹಣ ಬೇಕಾಗುತ್ತದೆ ನಿಜ ಆದರೆ ಹಣ ಸಂಪಾದನೆಯೇ ಜೀವನದ ಅಂತಿಮ ಉದ್ದೇಶ ಅಲ್ಲ. ಅತ್ಯಂತ ಕಡಿಮೆ ಸಂಪಾದನೆಯಲ್ಲಿಯೂ ಸುಖವಾಗಿರುವ ಜನರಿದ್ದಾರೆ ಮತ್ತು ಐಶಾರಾಮಿ ಜೀವನ ನಡೆಸುವವರು ದುಃಖದಿಂದಿರಬಹುದು. ಕೌಟುಂಬಿಕ ವಾಗಿಯಂತೂ ಮನುಷ್ಯ ಸೋತು ಗೆಲ್ಲಲೇಬೇಕು.

ಒಳ್ಳೆಯ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ ವ್ಯಕ್ತಿಯ ಜೀವನವನ್ನು ಉತ್ತಮ ಧ್ಯೇಯೋದ್ದೇಶಗಳತ್ತ ಎಳಸುತ್ತವೆ. ಆಧ್ಯಾತ್ಮದ ಆತ್ಮವನ್ನು ಹೊಂದಿರುವ ಭಾರತದಲ್ಲಿ ಎಲ್ಲಾ ರೀತಿಯ ಪಾರಮಾರ್ಥಿಕ ಸಮಸ್ಯೆಗಳಿಗೆ ನಮ್ಮ ಪೂರ್ವಜರು ರಚಿಸಿರುವ ಗ್ರಂಥಗಳಿಂದ ಉತ್ತರ ಸಿಗುತ್ತದೆ. ನಾವು ಅಧ್ಯಯನ ಶೀಲರಾಗಬೇಕಷ್ಟೆ.

ಅಂತಿಮವಾಗಿ ಯಶಸ್ಸು ಅತ್ಯಂತ ಕೆಟ್ಟ ಶಿಕ್ಷಕನಾದರೆ ಸೋಲು ಒಳ್ಳೆಯ ಪಾಠವನ್ನು ಕಲಿಸುತ್ತದೆ. ಆದ್ದರಿಂದ ನಿಮ್ಮ ಮಕ್ಕಳಿಗೆ ಅವರಿಗೆ ಅವಶ್ಯಕತೆ ಇಲ್ಲದ ಹೊರತು ಕೇಳಿದ ಕೂಡಲೇ ಎಲ್ಲವನ್ನೂ ಕೊಡಿಸಬೇಡಿ.... ನಿರಾಶೆಯ ನೋವನ್ನು ಚಿಕ್ಕಂದಿನಿಂದಲೇ ಅನುಭವಿಸಲು ಅವಕಾಶ ಮಾಡಿಕೊಡಿ. ಇದು ನೀವು ನಿಮ್ಮ ಮಕ್ಕಳ ಭವಿಷ್ಯ ಜೀವನಕ್ಕೆ ನೀವು ಕೊಡುವ ಒಳ್ಳೆಯ ಪಾಠವಾಗಿರುತ್ತದೆ.

ವಿಫಲತೆಯ, ಸೋಲು ಕಲಿಸುವಷ್ಟು ಒಳ್ಳೆಯ ಪಾಠ ಬದುಕಿನಲ್ಲಿ ಮತ್ತೊಂದಿಲ್ಲ, ಆದ್ದರಿಂದ ನಿಮ್ಮ ಮಕ್ಕಳಿಗೆ ಸೋಲನ್ನು ಒಪ್ಪಿಕೊಳ್ಳುವುದನ್ನು ಕಲಿಸಿ. ಸೋಲೊಪ್ಪಿಕೊಂಡ ವ್ಯಕ್ತಿ ನಂತರ ಗೆಲ್ಲುವ ಛಲ ಹೊತ್ತು ಮತ್ತೆ ಬದುಕಿನಲ್ಲಿ ಮುಂದುವರೆಯುತ್ತಾನೆ. ಸೋಲೇ ಗೆಲುವಿನ ಮೆಟ್ಟಿಲು ಎಂಬುದನ್ನು ಅರಿಯುತ್ತಾನೆ.

# ಪರೀಕ್ಷೆಯನ್ನು ಹೀಗೂ ಬರೆಯಬಹುದು...!

## ಪರೀಕ್ಷೆ ಒಂದು ಉತ್ಸವ– ಆಚರಿಸೋಣ ಬನ್ನಿ..

ಜೀವನವೇ ಒಂದು ಪರೀಕ್ಷೆ. ಹುಟ್ಟಿನಿಂದ ಸಾವಿನ ತನಕ ಮಾನವ ಸಾವಿರಾರು ಪರೀಕ್ಷೆಗಳನ್ನು ಎದುರಿಸುತ್ತಾನೆ. ಕೆಲವನ್ನು ಗೆಲ್ಲುತ್ತಾನೆ, ಕೆಲವನ್ನು ಸೋಲುತ್ತಾನೆ. ಸೋಲನ್ನು ಸವಾಲಾಗಿ ಸ್ವೀಕರಿಸಿ ಮತ್ತೆ ಗೆಲ್ಲುತ್ತಾನೆ. ಹೀಗೆ ಬದುಕಿನುದ್ದಕ್ಕೂ ಸೋಲು– ಗೆಲುವಿನ ಚದುರಂಗದಾಟ ನಡೆದೇ ಇರುತ್ತದೆ. ಪರೀಕ್ಷೆ ಎನ್ನುವುದು ಮಾನವನಲ್ಲಿ ಅಡಕವಾಗಿರುವ ಜಾಣ್ಮೆ, ತಾಳ್ಮೆ, ವಿನಯತೆ, ವಿಶೇಷತೆ, ವಿಭಿನ್ನತೆ, ದೋಷ, ರೋಷ ಹೀಗೆ ಎಲ್ಲವನ್ನೂ ಪತ್ತೆ ಹಚ್ಚುವುದರಿಂದ ಪರೀಕ್ಷೆಗೆ ಮಹತ್ವದ ಸ್ಥಾನವಿದೆ. ಹಾಗಂತ ಪರೀಕ್ಷೆಗೆ ಹೆದರಿ ಓಡಬೇಕಾಗಿಲ್ಲ ಎದುರಿಸಿ ಗೆಲ್ಲಬೇಕು. ಗೆಲುವಿಗೆ ಬೇಕಾದ ಸಿದ್ಧತೆ ಮಾಡಿಕೊಂಡು ಗುರಿಯನ್ನು ಮುಟ್ಟಬೇಕು. ಹೌದು ಈ ವಿಷಯವನ್ನು ಈಗ ಏಕೆ ಪ್ರಸ್ತಾಪಿಸುತ್ತಿದ್ದೀರಿ ಎಂದು ಆಲೋಚನೆಯೇ? ಕಾರಣ ಇಷ್ಟೆ, ಮಾರ್ಚ ತಿಂಗಳಿನಿಂದ ಪಿ.ಯು.ಸಿ ಹಾಗೂ, ಎಸ್.ಎಸ್ ಎಲ್.ಸಿ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಆ ಪರೀಕ್ಷೆಯ ಸಿದ್ಧತೆ ಕುರಿತು ಈ ಲೇಖನ ಕೆಲವು ಅಮೂಲ್ಯ ಸಲಹೆ ಸೂಚನೆ ನೀಡುತ್ತದೆ, ನನ್ನ ಪ್ರೀತಿಯ ವಿದ್ಯಾರ್ಥಿ ಮಿತ್ರರೇ ಇದನ್ನು ತಪ್ಪದೇ ಗಮನವಿಟ್ಟು ಓದಿ...

ಮಾರ್ಚ್–ಎಪ್ರಿಲ್ ತಿಂಗಳೆಂದರೆ ವಿದ್ಯಾರ್ಥಿಗಳ ಪರೀಕ್ಷೆಯ ಕಾಲ; ವರ್ಷವಿಡೀ ಓದಿದ್ದನ್ನು ಮೂರು ಗಂಟೆಯಲ್ಲಿ ಬರೆದು ತಮ್ಮ ಸಾಮರ್ಥ್ಯ ಪ್ರಕಟಪಡಿಸಲು ಇರುವ ಒಂದು ಸಾಧನವೇ ಪರೀಕ್ಷೆ, ಆದರೆ ಪರೀಕ್ಷೆ ಎಂಬ ಶಬ್ದ ಕೇಳಿದೊಡನೆಯೇ ವಿದ್ಯಾರ್ಥಿಗಳ ಮನದ ಮೂಲೆಯಲ್ಲಿ ಅಡಗಿದ್ದ ಆತಂಕ, ಭಯ ಉದ್ವೇಗ ಎಲ್ಲವೂ ತಾ ಮುಂದು ನಾ ಮುಂದು ಎಂದು ಲಗ್ಗೆ ಇಟ್ಟು ಇದುವರೆಗೂ ಅರಳಿದ ಹೂವಿನಂತೆ ಇದ್ದ ಹುಡುಗ/ಹುಡುಗಿ ಒಮ್ಮೆಲೇ ಬಾಡಿದ ಹೂವಿನಂತಾಗುತ್ತಾರೆ, ಕಾರಣ ಅವರಲ್ಲಿನ ಪರೀಕ್ಷಾ ಭಯ. ಪ್ರಿಯ ವಿದ್ಯಾರ್ಥಿ ಮಿತ್ರರೆ, ಪರೀಕ್ಷೆ ಎಂದರೆ ಆತಂಕಬೇಡ ಆತ್ಮ ವಿಶ್ವಾಸವಿರಲಿ, ಭಯಬೇಡ ಉತ್ಸಾಹವಿರಲಿ. ಪರೀಕ್ಷೆ ಒಂದು ಉತ್ಸವ ಸಂಭ್ರಮದಿಂದ ಆಚರಿಸೋಣ.

## ಅಂತಿಮ ಪರೀಕ್ಷೆ ಎಂದರೆ ಭಯವೇಕೆ?

ಪ್ರಿಯ ಮಿತ್ರರೆ ನೀವು ಈಗಾಗಲೇ ನಿಮ್ಮ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮೂರರಿಂದ ನಾಲ್ಕು ಕಿರುಪರೀಕ್ಷೆಗಳನ್ನು ಅರ್ಧವಾರ್ಷಿಕ ಪರೀಕ್ಷೆಗಳನ್ನು ಹಾಗೂ ಎರಡು ಸಿದ್ಧತಾ ಪರೀಕ್ಷೆಗಳನ್ನು ನಿಮ್ಮ ಶಾಲಾ ಕಾಲೇಜು ಹಂತದಲ್ಲಿ ಬರೆದಿರುತ್ತೀರಿ, ಅಂದಮೇಲೆ ನಿಮಗೆ ಪರೀಕ್ಷೆ ಹೊಸದೇನಲ್ಲ, ಪಠ್ಯಕ್ರಮ ಗೊತ್ತಿದೆ, ಪ್ರಶ್ನೆ ಪತ್ರಿಕೆಯ ಮಾದರಿ ಗೊತ್ತಿದೆ, ಯಾವ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎಂಬುದನ್ನು ನಿಮ್ಮ ಗುರುಗಳು ಹೇಳಿದ್ದಾರೆ, ಈಗಾಗಲೇ ನಿಮಗೆ ನಿಮ್ಮ ಬಲ ಯಾವುದು? ದೌರ್ಬಲ್ಯ ಯಾವುದು? ಅದನ್ನು ಹೇಗೆ ಸರಿಪಡಿಸಿಕೊಳಬೇಕು ಎಲ್ಲವು ತಿಳಿದಿದೆ. ಇಷ್ಟೆಲ್ಲಾ ಮಾಹಿತಿ ತಿಳಿದಿರುವ ನೀವು ಅಂತಿಮ ಪರೀಕ್ಷೆ ಎಂದ ಕೂಡಲೆ ಭಯ ಪಡುವುದೇಕೆ? ಎಲ್ಲ ಪರೀಕ್ಷೆಯಂತೆ ಇದು ಒಂದು ಪರೀಕ್ಷೆ ಅಷ್ಟೆ. ಅದೇ ಪ್ರಶ್ನೆ ಪತ್ರಿಕೆ! ಅದೇ ಉತ್ತರ ಪತ್ರಿಕೆ!!. ಪ್ರಶ್ನೆಗಳು ಕೂಡ ನೀವು ಓದಿದವುಗಳೇ! ಹೀಗಿರುವಾಗ ಅಂತಿಮ ಪರೀಕ್ಷೆಗೆ ಹೆದರಿ ಆತ್ಮ ವಿಶ್ವಾಸ ಕಳೆದುಕೊಳ್ಳುವುದರಲ್ಲಿ ಯಾವುದೇ ಅರ್ಥವಿಲ್ಲ ಹೋಳಿ ಆಡಿದಂತೆ ಪರೀಕ್ಷೆ ಎನ್ನುವ ಬಣ್ಣದ ಹಬ್ಬವನ್ನು ಸಂಭ್ರಮದಿಂದ ಆಚರಿಸಿ. ಭಯ ಬಿಡಿ ವಿಶ್ವಾಸದಿಂದ ಪರೀಕ್ಷೆ ಎದುರಿಸಿ ಖಂಡಿತಾ ನಿಮಗೆ ಯಶಸ್ಸು ಸಿಕ್ಕೇ ಸಿಗುತ್ತದೆ.

## ಪರೀಕ್ಷೆಯ ಅಂತಿಮ ತಯಾರಿ ಹೀಗಿರಲಿ ಗೆಳೆಯರೆ

1. ಪರೀಕ್ಷೆಯ ಅಂತಿಮ ತಯಾರಿ ಬಹು ಮುಖ್ಯವಾದದ್ದು ಇಷ್ಟು ದಿನ ನೀವು ಏನನ್ನು ಓದಿದ್ದಿರೋ ಅದೆಲ್ಲವನ್ನು ನೆನಪಿನಲ್ಲಿ ಇಟ್ಟು ಕೊಳ್ಳಲು ಕೆಲವೊಂದು ಕೀ ಪಾಯಿಂಟ್ ಮಾಡಿಕೊಂಡು ಸದಾ ನಮ್ಮ ಜೇಬಿನಲ್ಲಿ ಇರಿಸಿಕೊಂಡರೆ ಒಳ್ಳೆಯದು, ಪದೇ ಪದೇ ಪುಸ್ತಕ ತಿರುವಿ ಹಾಕಿ ಸಮಯ ವ್ಯರ್ಥ ಮಾಡುವುದಕ್ಕಿಂತ ಕೀ ಪಾಯಿಂಟ್ ನೋಡಿದ ಕೂಡಲೇ ಇಡೀ ಆ ಪ್ಯಾರ ನಿಮ್ಮ ಕಣ್ಮುಂದೆ ಬರಬೇಕು, ಹಾಗೆ ತಯಾರಿಸಿಟ್ಟುಕೊಳ್ಳಿ.

2. ಪ್ರಮುಖ Formula, ಗಣಿತದ ಸೂತ್ರಗಳು,ಇತಿಹಾಸದ ಘಟನೆ ಜರುಗಿದ ಕಾಲ, ಪ್ರಮುಖ ತಜ್ಞರ ಹೇಳಿಕೆ–ಈ ಎಲ್ಲ ವಿವರಗಳನ್ನು ಒಂದು ಪ್ಲೋ ಚಾರ್ಟ್ ತಯಾರಿಸಿಕೊಂಡು ನೀವು ಓದುವ ಕೋಣೆಯ ಗೋಡೆಗೆ ಅಂಟಿಸಿಕೊಂಡಿರಿ. ನೀವು ಸುಮ್ಮನೆ ಅವುಗಳನ್ನು ನೋಡುತ್ತಿದ್ದರೆ ಸಾಕು ಎಲ್ಲವೂ ಜ್ಞಾಪಕಕ್ಕೆ ಬರುತ್ತವೆ.

3. ನೀವು ಈಗಾಗಲೆ ನಿಮ್ಮ ಪ್ರವೇಶ ಪತ್ರವನ್ನ ಪಡೆದಿದ್ದೀರಿ ಅಲ್ಲವೇ? ಅದರಲ್ಲಿ ನಿಮ್ಮ ಪರೀಕ್ಷಾ ದಿನಾಂಕ, ಪರೀಕ್ಷಾ ಕೇಂದ್ರ, ಪರೀಕ್ಷಾ ಅವಧಿ, ಪರೀಕ್ಷಾ ನಿಯಮಗಳು ಎಲ್ಲವೂ ಮುದ್ರಣವಾಗಿರುತ್ತವೆ ನೀವು ಅದನ್ನು ಸಂಪೂರ್ಣ ಓದಿ ನಿಮ್ಮ ಪರೀಕ್ಷಾ ದಿನಾಂಕಗಳನ್ನು ನಿಮ್ಮ ಮನೆಯ ಕ್ಯಾಲೆಂಡರಿನಲ್ಲಿ ಗುರುತು ಹಾಕಿಕೊಳ್ಳಿ,

4. ಪರೀಕ್ಷೆ ಹತ್ತಿರಕ್ಕೆ ಬಂದಂತೆಲ್ಲಾ ನಿದ್ದೆಗೆಟ್ಟು ಓದುವ ಸಾಹಸ ಮಾಡಬೇಡಿ ಅತಿಯಾಗಿ ನಿದ್ದೆ ಕಟ್ಟುವುದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಪರೀಕ್ಷೆಯ ಹಿಂದಿನ ರಾತ್ರಿ ಮಾತ್ರ ಯಾವ ಕಾರಣಕ್ಕೂ ತಡರಾತ್ರಿಯವರೆಗೆ ಓದಬೇಡಿ ರಾತ್ರಿ 10 ಕ್ಕೆ ಮಲಗಿ ಬೆಳಗಿನ ಜಾವ 5. ಕ್ಕೆ ಎದ್ದು ಅಂದಿನ ಪರೀಕ್ಷೆಯ ವಿಷಯದ ಕೀ ನೋಟ್ ಒಮ್ಮೆ ನೆನಪಿಸಿಕೊಂಡು ಪರೀಕ್ಷೆಗೆ ಹೊರಡುವ ಸಿದ್ಧತೆ ಮಾಡಿಕೊಳ್ಳಿ.



ಎ.ಎಂ.ಪಿ.ವೀರೇಶಸ್ವಾಮಿ
ಕನ್ನಡ ಉಪನ್ಯಾಸಕರು, ಬಳ್ಳಾರಿ

Scan For Digital Colourful
HAMPI TIMES E-paper

## ಗಾಳಿ ಸುದ್ದಿಗಳಿಗೆ ಕಿವಿಗೊಡಬೇಡಿ– ಹುಷಾರ್!

ಪರೀಕ್ಷೆಯ ಹಿಂದಿನ ದಿನ ಅಥವಾ ಎರಡು ದಿನ ಮುಂಚಿತವಾಗಿ ಕಿಡಿಗೇಡಿಗಳು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಪರೀಕ್ಷೆ ಮುಂದೂಡುತ್ತಾರೆ ಎನ್ನುವ ಗಾಳಿಸುದ್ದಿ ಹಬ್ಬಿಸಿ ನಿಮ್ಮ ಮನಸ್ಸನ್ನು ಮತ್ತಷ್ಟು ಆತಂಕಕ್ಕೆ ದೂಡುವ ಸನ್ನಿವೇಶ ನಿರ್ಮಾಣ ಮಾಡುತ್ತಾರೆ, ಇಂತಹ ಯಾವುದೇ ಗಾಳಿಸುದ್ಧಿಗೆ ಕಿವಿಗೊಡದಿರಿ. ನಿಮ್ಮ ಸಿದ್ಧತೆ ನೀವು ಮಾಡಿಕೊಳ್ಳಿ. ಕೆಲವೊಂದು ಜನ ಪರೀಕ್ಷೆ ಸಮಯವನ್ನು ಬಂಡವಾಳ ಮಾಡಿಕೊಂಡು ಯಾವುದೋ ಹಳೆಯ ಪ್ರಶ್ನೆಪತ್ರಿಕೆಗೆ ಹೊಸ ದಿನಾಂಕ ಹಾಕಿ ನಮ್ಮಲ್ಲಿ ನಾಳೆ ಜರುಗುವ ವಿಷಯದ ಪ್ರಶ್ನೆ ಪತ್ರಿಕೆ ಇದೆ 2000 ರಿಂದ 3000 ಕೊಟ್ಟರೆ ಆ ಪ್ರಶ್ನೆಪತ್ರಿಕೆ ನಿಮ್ಮ ಕೈ ಸೇರುತ್ತೆ ಎನ್ನುವ ವದಂತಿ ಹಬ್ಬಿಸುತ್ತಾರೆ, ಇಲ್ಲವೆ ಅನಾಮಧೇಯ ಕರೆಗಳು ಬರುತ್ತವೆ. ಇಂತಹ ಆಮಿಷಕ್ಕೆ ಬಲಿಯಾಗಿ ನಿಮ್ಮ ಹಣ ಹಾಗು ಸಮಯ ವ್ಯರ್ಥ ಮಾಡಿಕೊಳ್ಳಬೇಡಿ ನಿಮ್ಮ ಮನಸ್ಸು ಓದಿನ ಕಡೆಗೆ ಇರಲಿ ಇಂತಹ ಗಾಳಿ ಸುದ್ದಿ ನಂಬಬೇಡಿ! ಹುಷಾರ್!! ಹುಷಾರ್!!!.....

## ಪರೀಕ್ಷೆಗೆ ಹೊರಡುವ ಮುನ್ನ ...

1. ಇನ್ನೇನು ಪರೀಕ್ಷೆಗೆ ಹೊರಡುವ ಸಮಯ ಸಮೀಪಿಸಿತು, ಸ್ನಾನ ಮಾಡಿ ಉಪಹಾರ ಸೇವಿಸಿ. ಹೊಟ್ಟೆ ತುಂಬಾ ಊಟ ಬೇಡ! ಎಣ್ಣೆ ಪದಾರ್ಥವೂ ಬೇಡ!! ಸಾತ್ವಿಕ ಆಹಾರ ಸೇವಿಸಿ!!! ನಿಮ್ಮ ಶಾಲೆ ಅಥವಾ ಕಾಲೇಜಿನ ಸಮವಸ್ತ್ರ ಧರಿಸಿಕೊಂಡು ತಂದೆ ತಾಯಿಗೆ ನಮಿಸಿ, ಪರೀಕ್ಷೆ ಬರೆಯಲು ಬೇಕಾದ ಗುಣಮಟ್ಟದ ಪೆನ್ನು, ಪೆನ್ಸಿಲ್, ಜಾಮಿಟ್ರ ಬಾಕ್ಸ, ಪ್ರವೇಶ ಪತ್ರ, ಗುರುತಿನ ಪತ್ರ – ಎಲ್ಲವನ್ನೂ ತೆಗೆದುಕೊಂಡು ನಿಮ್ಮ ಪರೀಕ್ಷಾ ಕೇಂದ್ರಕ್ಕೆ ಹೊರಡಿ,

2. ಸರ್ಕಾರ ಪರೀಕ್ಷೆ ಬರೆಯವ ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ ಸೌಲಭ್ಯ ಕಲ್ಪಿಸಿದೆ, ಅವಶ್ಯಕತೆ ಇದ್ದರೆ ಬಳಸಿಕೊಳ್ಳಿ ಯಾವುದೇ ಕಾರಣಕ್ಕೂ ನೀವೇ ಬೈಕ್ ಚಾಲನೆ ಮಾಡಿಕೊಂಡು ಹೋಗಬೇಡಿ. ನಿಮ್ಮ ಪೋಷಕರ ನೆರವಿನಿಂದ ಪರೀಕ್ಷಾ ಕೇಂದ್ರಕ್ಕೆ ಬನ್ನಿ ಹತ್ತಿರವಿದ್ದರೆ ನಡೆದುಕೊಂಡೇ ಬನ್ನಿ.

3. ಪರೀಕ್ಷಾ ಕೇಂದ್ರಕ್ಕೆ ಅರ್ಧ ಗಂಟೆ ಮುಂಚಿತವಾಗಿ ಬಂದು ಪರೀಕ್ಷಾ ಕೇಂದ್ರದ ಹೊರಗಡೆ ಇರುವ ನೋಟೀಸ್ ಬೋರ್ಡಿನಲ್ಲಿ ಪ್ರಕಟ ಪಡಿಸಿರುವ ನಿಯಮಾವಳಿ ಸೂಚಿಯನ್ನು ಲಕ್ಷ್ಯಗೊಟ್ಟು ಓದಿ, ನಿಮ್ಮ ನೊಂದಣಿ ಸಂಖ್ಯೆ ಯಾವ ಕೊಠಡಿಯಲ್ಲಿ ಇದೆ ಎಂಬುದನ್ನು ಸಮಾಧಾನದಿಂದ ಸರಿಯಾಗಿ ತಿಳಿದುಕೊಂಡು ಕೊಠಡಿ ಸಂಖ್ಯೆಯನ್ನು ಖಚಿತ ಪಡಿಸಿಕೊಳ್ಳಿ.

4. ಪರೀಕ್ಷಾ ಕೇಂದ್ರದಲ್ಲಿ ಗೆಳೆಯರೊಂದಿಗೆ ಹರಟೆ ಚರ್ಚೆ ಏನೂ ಬೇಡ. ಕೊನೆಯ ಕ್ಷಣದವರೆಗೂ ಓದಬೇಡಿ. ಪರೀಕ್ಷಾ ಕೇಂದ್ರದ ಒಳಗಡೆ ಹೋಗುವ ಮುನ್ನ ಜೇಬಿನಲ್ಲಿ ಏನಾದರೂ ಪೇಪರ್ ಇದ್ದರೆ ತೆಗೆದುಹಾಕಿ ಯಾವ ಕಾರಣಕ್ಕೂ ಪರೀಕ್ಷಾ ಸಾಮಗ್ರಿಗಳನ್ನು ಪರೀಕ್ಷಾ ಕೊಠಡಿ ಒಳಗೆ ತೆಗೆದುಕೊಂಡು ಹೋಗಬೇಡಿ.

5. ವಾಚ್ ಮೊಬೈಲ್, ವೈಜ್ಞಾನಿಕ ಕ್ಯಾಲ್ಕುಲೇಟರ್ ಇನ್ನಿತರ ಸಾಮಗ್ರಿಗಳನ್ನು ಒಯ್ಯಲು ಅವಕಾಶವಿಲ್ಲ. ನಿಮ್ಮ ಕೋಣೆಯಲ್ಲಿ ನಿಮ್ಮ ನಂಬರ್ ಎಲ್ಲಿದೆ? ನೀವು ಕುಳಿತುಕೊಳ್ಳುವ ಡೆಸ್ಕ್ ಮೇಲಿರುವ ನಂಬರ್ ನಿಮ್ಮದೆ ಎಂದು ಖಾತ್ರಿ ಮಾಡಿಕೊಂಡು ಅಕ್ಕ ಪಕ್ಕದಲ್ಲಿ ಚೀಟಿ ಬಿದ್ದಿದ್ದರೆ ಅದನ್ನು ಹೊರಗೆ ಹಾಕಿ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತುಕೊಳ್ಳಿ.

## ಪ್ರಶ್ನೆ ಪತ್ರಿಕೆಯೆ ಕೈಗೆ ಬಂದಾಗ..

ಒಂದು ವರ್ಷ ಯಾವ ಕ್ಷಣಕ್ಕಾಗಿ ಹಗಲಿರುಳು ಶ್ರಮಪಟ್ಟಿದ್ದಿರೋ ಜಾತಕ ಪಕ್ಷಿಯಂತೆ ಕಾದಿದ್ದಿರೋ ಆ ಅಮೃತಗಳಿಗೆ ಈಗ ಬಂದೇ ಬಿಟ್ಟಿತು. ಕೊಠಡಿ ಮೇಲ್ವಿಚಾರಕರು ಪ್ರಶ್ನೆ ಪತ್ರಿಕೆ ವಿತರಿಸುವಾಗ ನಿಮ್ಮ ಹೃದಯದ ಬಡಿತ ಇನ್ನೂ ವೇಗವಾಗುತ್ತದೆ ಕುತೂಹಲ ಇಮ್ಮಡಿಗೊಳ್ಳುತ್ತದೆ. ಪ್ರಶ್ನೆ ಪತ್ರಿಕೆ ಕೈಗೆ ಬಂತು, ಆವೇಶ ಉದ್ವೇಗ ಬೇಡ ಸಮಾಧಾನದಿಂದ ಪ್ರಶ್ನೆ ಪತ್ರಿಕೆ ಓದಿ, ನಿಮಗೆ ಗೊತ್ತಿರುವ ಪ್ರಶ್ನೆಗಳೇ ಇವೆ! ಅಬ್ಬಾ! ಈಗ ನೆಮ್ಮದಿಯ ನಿಟ್ಟುಸಿರು!

ಮೊಗದಲ್ಲಿ ಸಂತೋಷ!! ಅದೇ ಉತ್ಸಾಹದಲ್ಲಿ ಗೊತ್ತಿರುವ ಉತ್ತರಗಳನ್ನು ಪ್ರಶ್ನೆ ಪತ್ರಿಕೆಯಲ್ಲಿ ಗುರುತು ಹಾಕಬೇಡಿ ಪ್ರಶ್ನೆ ಪತ್ರಿಕೆಯಲ್ಲಿ ಏನನ್ನೂ ಬರೆಯುವಂತಿಲ್ಲ. 10 ನಿಮಿಷದ ನಂತರ ಉತ್ತರ ಪತ್ರಿಕೆ ಕೊಡುತ್ತಾರೆ, ಉತ್ತರ ಪತ್ರಿಕೆ ಕೊಟ್ಟ ತಕ್ಷಣವೇ ಅದು ಸರಿಯಾಗಿದೆಯಾ ಎಲ್ಲ ಪುಟಗಳೂ ಕ್ರಮಬದ್ಧವಾಗಿವೆಯಾ ಎಂದು ಪರೀಕ್ಷಿಸಿಕೊಳ್ಳಿ. ಲೋಪ–ದೋಷಗಳೇನಾದರೂ ಇದ್ದರೆ ಕೊಠಡಿ ಮೇಲ್ವಿಚಾರಕರ ಗಮನಕ್ಕೆ ತನ್ನಿ. ಬೇರೆ ಉತ್ತರ ಪತ್ರಿಕೆ ನೀಡುತ್ತಾರೆ, ಉತ್ತರ ಪತ್ರಿಕೆ ಸರಿಯಾಗಿದ್ದರೆ ಅದರಲ್ಲಿ ನಿಮ್ಮ ನೊಂದಣಿ ಸಂಖ್ಯೆ ಪರೀಕ್ಷಾ ದಿನಾಂಕ, ವಿಷಯ ಹಾಗೂ ವಿಷಯ ಸಂಕೇತವನ್ನು ನಿಗದಿತ ಕಾಲಂಗಳಲ್ಲಿ ನಮೂದಿಸಿ ನಂತರ ಕೊಠಡಿ ಮೇಲ್ವಿಚಾರಕರ ಸಹಿ ಪಡೆದುಕೊಳ್ಳಿ. ಎಲ್ಲಿಯೂ ನಿಮ್ಮ ಹೆಸರು ಬರೆಯಬೇಡಿ. ಬರೆಯಲು ಪ್ರಾರಂಭಿಸಿ ಎಂದು ಮೇಲ್ವಿಚಾರಕರು ಅನುಮತಿ ಕೊಟ್ಟ ನಂತರ ಉತ್ತರ ಬರೆಯಲು ಪ್ರಾರಂಭಿಸಿ.

## ಉತ್ತರ ಬರೆಯುವ ಮುನ್ನ..

ಉತ್ತರಗಳನ್ನು ಬೇಗ ಬೇಗ ಬರೆಯುವ ಆತುರ ಬೇಡ ಮೂರು ಗಂಟೆಯ ಸಮಯವಿದೆ ಸಮಧಾನ ಚಿತ್ತದಿಂದ ಉತ್ತರ ಬರೆಯಲು ಪ್ರಾರಂಭಿಸಿ. ಉತ್ತರ ನಿಖರವಾಗಿರಲಿ ಮೌಲ್ಯಮಾಪಕರ ಗಮನ ಸೆಳೆಯುವಂತಿರಲಿ. ಅಕ್ಷರಗಳನ್ನು ತೀರ ಚಿಕ್ಕ ತೀರ ದೊಡ್ಡ ಗಾತ್ರದಲ್ಲಿ ಬರೆಯಬೇಡಿ. ಮಧ್ಯಮ ಗಾತ್ರದಲ್ಲಿದ್ದರೆ ಸಾಕು!. ನೀಲಿ ಅಥವಾ ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನು ಬಳಸಿ ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರ ಬರೆಯಿರಿ. ನಂತರ ನೆನಪಿಸಿಕೊಂಡು ಉಳಿದ ಪ್ರಶ್ನೆಗಳಿಗೆ ಉತ್ತರಿಸಿ. ಬೇಗ ಮುಗಿಸಿ ಹೊರಬರಲು ಆತುರಪಡಬೇಡಿ! ಮೂರು ಗಂಟೆಯವರೆಗೂ ತಾಳ್ಮೆಯಿಂದ ಉತ್ತರ ಬರೆಯಿರಿ; ಬರೆದದ್ದನ್ನು ಇನ್ನೊಮ್ಮೆ ಓದಿ ಏನಾದರೂ ತಪ್ಪಿದ್ದರೆ ಸರಿಪಡಿಸಿ. ದಿನಚರಿಯಲ್ಲಿ (Diary) ನಿಮ್ಮ ಸಹಿ ಹಾಕಿ, ಕೊನೆಯ ಬೆಲ್ ಆದಾಗ ನಿಮ್ಮ ಉತ್ತರ ಪತ್ರಿಕೆಯನ್ನು ಮೇಲ್ವಿಚಾರಕರ ಕೈಗೆ ಒಪ್ಪಿಸಿ ನಿಮ್ಮ ಸಲಕರಣೆಗಳನ್ನು ತೆಗೆದುಕೊಂಡು ನಗು ನಗುತ್ತಾ ಹೊರಬನ್ನಿ...

## ಪರೀಕ್ಷೆ ಮುಗಿದ ನಂತರ...

ಸಹಜವಾಗಿ ವಿದ್ಯಾರ್ಥಿಗಳು ಪರೀಕ್ಷೆಯಿಂದ ಹೊರಬಂದ ತಕ್ಷಣವೆ ಉತ್ತರಗಳ ಬಗ್ಗೆ ಇತರ ಗೆಳೆಯರೊಂದಿಗೆ ಚರ್ಚೆ ಮಾಡುತ್ತಾ ಕಾಲೇಜಿನ ಕಾರಿಡಾರ್ನಲ್ಲಿ ನಿಂತಿರುತ್ತಾರೆ ಇದು ಸರ್ವಥಾ ತಪ್ಪು ಉತ್ತರ ಪತ್ರಿಕೆ ಕೊಟ್ಟಾದ ಮೇಲೆ ಅದರ ಬಗ್ಗೆ ಚರ್ಚೆ ಮಾಡಿ ಪ್ರಯೋಜನವಿಲ್ಲ, ಜೊತೆಗೆ ಇಲ್ಲದ ಆತಂಕ ಶುರುವಾಗುತ್ತದೆ, ಅಯ್ಯೋ ಉತ್ತರ ತಪ್ಪು ಬರೆದೆ ಹೇಗೆ? ಏನು ಮಾಡುವುದು? ಎನ್ನುವ ಚಿಂತೆ ಇಟ್ಟುಕೊಂಡು ಮನೆಗೆ ಬಂದರೆ ಮುಂದಿನ ಪರೀಕ್ಷೆಯ ತಯಾರಿ ಮಾಡಲು ಮನಸ್ಸು ಬರುವುದಿಲ್ಲ! ದಿನವಿಡೀ ಅದರ ಬಗ್ಗೆ ಯೋಚಿಸಿ ಯೋಚಿಸಿ ಸಮಯ ವ್ಯರ್ಥವಾಗತ್ತದೆಯೇ ಹೊರತು ಲಾಭವಿಲ್ಲ, ಹಾಗಾಗಿ ಪರೀಕ್ಷೆ ಮುಗಿದ ಕೂಡಲೇ ನೀವು ಯಾರೊಂದಿಗೂ ಏನನ್ನೂ ಚರ್ಚಿಸದೆಯೇ ಮನೆಗೆ ಬನ್ನಿ. ಬಿಸಿಯಾದ ಆಹಾರ ಸೇವಿಸಿ ಎರಡು ಗಂಟೆ ನಿದ್ರಿಸಿ, ಸಾಯಂಕಾಲ 30 ನಿಮಿಷ ವಾಯುವಿಹಾರ ಮಾಡಿ ಬಂದು ಮತ್ತೆ ಎಂದಿನಂತೆ ಅದೇ ಉತ್ಸಾಹದಲ್ಲಿ ಮುಂದಿನ ಪರೀಕ್ಷೆ ತಯಾರಿ ಪ್ರಾರಂಭಿಸಿ. ಹೀಗೆ ಎಲ್ಲ ಪರೀಕ್ಷೆ ಬರೆದು ನಿರಮ್ಮಳರಾಗಿ... ಪರೀಕ್ಷೆ ಕಷ್ಟ ಪಟ್ಟು ಬರೆಯುವುದಲ್ಲ! ಇಷ್ಟ ಪಟ್ಟು ಬರೆಯುವುದು!. ವಿದ್ಯಾರ್ಥಿ ಮಿತ್ರರೆ ನಿಮ್ಮ ಪರೀಕ್ಷೆಗಳೆಲ್ಲಾ ಚೆನ್ನಾಗಿ ಆಗಲಿ ನಿಮ್ಮ ಕನಸುಗಳು ನನಸಾಗಲಿ ಎಂದು ಈ ಪತ್ರಿಕೆ ಶುಭ ಹಾರೈಸುತ್ತದೆ.

## ಕವಿ ಮನಸು

### ಇಲ್ಲದ ಮಗುವಿನ ಮೇಲಾಣೆ

ಇಲ್ಲದ ಮಗುವಿನ ಮೇಲೆ
ಆಣೆಯ ಇಟ್ಟರು ನೋಡಣ್ಣ
ಜಗದಲಿ ಇಂಥವರಿಗೇನೆ
ಜಾಗವು ತಿಳಿಯಣ್ಣ

ಆಣೆಯ ಇಟ್ಟರೆ ಯಾರಿಗೆ
ನಷ್ಟವು ನೀನೇ ಹೇಳಣ್ಣ
ಇಲ್ಲದ ಮಗುವಿಗೆ
ಏನಾಗುವುದು ನೀನೇ ಹೇಳಣ್ಣ

ಅಂಗೈಯಲ್ಲಿ ಅರಮನೆ ತೋರುತ
ಸಾಗಿದೆ ನೋಡು ರಾಜಕೀಯ
ಮೂಗಿಗೆ ತುಪ್ಪ ಸವರಿದರಯ್ಯ
ವಾಸನೆ ಕೂಡ ಬಿಡದೇ ನೆಕ್ಕಿದರಯ್ಯ

ಇಲ್ಲದ ದೇವರ ಗುಡಿ ಗುಂಡಾರದಿ
ಹುಡುಕುತ ನಡೆದರಯ್ಯ
ದೀನ ದಲಿತರ ಸೇವೆಯ ಮರೆತು
ಹೋದರೆ ದೇವರು ಸಿಗುವನೇನಯ್ಯ

ಆಕಡೆ ಈಕಡೆ ಯಾವ ಕಡೆ
ನೋಡಲು ಜಾತಿ ಬೆಂಕಿಯಣ್ಣ
ಉರಿಯುವ ಬೆಂಕಿಲಿ ತಮ್ಮ ಸ್ವಾರ್ಥವ
ಬೇಯಿಸಿ ತಿನುವರು ನೋಡಣ್ಣ

ಸತ್ಯದ ಹಾದೀಲಿ ನಡೆಯುತಲಿರಲು
ಬದುಕು ಕಷ್ಟವು ಕಾಣಣ್ಣ
ಮಿತ್ಯದಿ ಹಾದಿ ಸುಂದರ ಕಂಡರೂ
ಮುಂದಿನ ದಿನ ಬಿಡುವುದು ಬಣ್ಣ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್ ಹೊಸಪೇಟೆ

## ಚುಟುಕು



ಅನಿರೀಕ್ಷಿತ ವಿಷಯಗಳು ಜೀವನದಲ್ಲಿ
ನಿಶ್ಚಿತ.
ನಿರೀಕ್ಷಿಸಿದ ವಿಷಯಗಳು ಕೈ ತಪ್ಪಬಹುದು
ಖಂಡಿತ.
ಅನಿರೀಕ್ಷಿತ, ನಿರೀಕ್ಷಿತ ಸಂದರ್ಭಗಳ
ನಡುವಿನ ಓಟ ಅಪರಿಮಿತ.
ಒಳಿತೋ, ಕೆಡುಕೋ ಇವುಗಳ
ಅನುಭವದೊಂದಿಗೆ ಬದುಕು ಜೀವಂತ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ.

## ರಾಜ್ಯಮಟ್ಟದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆ: ವೀರಾಪುರ ವೆಂಕೊಬ ಪ್ರಥಮ ಸ್ಥಾನ



**ಹಂಪಿ ಟೈಮ್ಸ್ ಕೊಪ್ಪಳ**
ಕನಕಗಿರಿ ಉತ್ಸವ–2024ರ ಅಂಗವಾಗಿ ಕನಕಗಿರಿಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಸಂಗ್ರಾಣಿ ಕಲ್ಲು ಎತ್ತುವ ದೇಶಿಕ್ರೀಡೆ ಸಾರ್ವಜನಿಕರ ಗಮನ ಸೆಳೆಯಿತು. ಪುರುಷರ ವಿಭಾಗದ ರಾಜ್ಯಮಟ್ಟದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲೆಯ ವೀರಾಪುರದ ವೆಂಕೊಬ ಪ್ರಥಮ ಸ್ಥಾನ ಪಡೆದುಕೊಂಡರು.
ಕನಕಗಿರಿ ಉತ್ಸವದ ಕ್ರೀಡಾಕೂಟಕ್ಕೆ ಸಾರ್ವಜನಿಕರಿಂದ ಹೆಚ್ಚು ಸ್ಪಂಧನೆ ಸಿಗುತ್ತಿದೆ. ಕೊಪ್ಪಳ ಜಿಲ್ಲೆ ಹಾಗೂ ವಿವಿಧ ಜಿಲ್ಲೆಗಳ ಕ್ರೀಡಾಪಟುಗಳು ಸ್ಪರ್ಧೆಗಳಲ್ಲಿ ಭಾಗವಹಿಸಿ ಸ್ಪರ್ಧಿಸುತ್ತಿದ್ದಾರೆ. **ಸ್ಪರ್ಧೆಯ ಫಲಿತಾಂಶ:** ಪುರುಷರ ವಿಭಾಗದ ರಾಜ್ಯಮಟ್ಟದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ವೀರಾಪುರದ ವೆಂಕೊಬ ಅವರು 88 ಕೆಜಿ ಸಂಗ್ರಾಣಿ ಕಲ್ಲು ಎತ್ತುವ ಮೂಲಕ ಜಯಶಾಲಿಯಾಗಿ ಪ್ರಥಮ ಸ್ಥಾನ ಪಡೆದುಕೊಂಡರು. ಅದೆ ರೀತಿ 81 ಕೆಜಿ ಸಂಗ್ರಾಣಿ ಕಲ್ಲು ಎತ್ತಿದ ಗದಗ ಜಿಲ್ಲೆಯ ನರಗುಂದಿನ ಮುತ್ತುರಡ್ಡಿ ಅವರು ದ್ವಿತೀಯ ಸ್ಥಾನ ಪಡೆದರೆ, 78 ಕೆಜಿ ಸಂಗ್ರಾಣಿ ಕಲ್ಲು ಎತ್ತಿದ ಹಾಲಪ್ಪ ತೃತೀಯ ಸ್ಥಾನ ಪಡೆದುಕೊಂಡರು.

# ಹಾದಿಯ ಚೆಲುವು

ಮುಂದುವರೆದಭಾಗ....

ಪ್ರವಾಸದಲ್ಲಿ ನಾವು ನೋಡುವ ಯಾವುದೊ ಸಂಗತಿ ಬಾಳಿನ ಮತ್ತೇನನ್ನೊ ನೆನಪನ್ನು ಕೆರಳಿಸಿ ಭಾವುಕಗೊಳಿಸಬಲ್ಲದು. ನನ್ನೊಬ್ಬ ಸ್ನೇಹಿತರು ಪ್ಯಾಲೆಸ್ತೇನ್–ಇಸ್ರೇಲ್ ಪ್ರವಾಸದಲ್ಲಿ, ಪ್ರಾಚೀನ ಅರಬ್ ಯಹೂದಿಗಳು ಬಳಸುತ್ತಿದ್ದ ಕಟ್ಟಿಗೆಯ ಬಾಚಣಿಗೆ ನೋಡಿ ಭಾವುಕರಾದರು. ಅವರು ಬಾಚಣಿಗೆ ಮಾಡುತ್ತಿದ್ದ ಕುಟುಂಬದಿಂದ ಬಂದವರು. ಅವರೆಂದರು: "ಬಾಚಣಿಗೆಯ ಹಲ್ಲುಗಳನ್ನು ಕೊರೆಯುವುದು ನಾಜೂಕಿನ ಕೆಲಸ. ಒಂದು ಹಲ್ಲು ಮುರಿದರೂ ಇಡೀ ಬಾಚಣಿಗೆಯನ್ನು ವ್ಯರ್ಥವಾಗುತ್ತದೆ. ನೋಡಿ, ಸಾವಿರಾರು ವರ್ಷ ಕಳೆದರೂ ಇದರ ಹಲ್ಲುಗಳು ಮುರಿಯದೆ ಉಳಿದಿವೆ'. ನಾವು ಮರದ ಬಾಚಣಿಗೆ ಬಳಸಿ ಹೇನುಕೂರೆ ಗೋಚಿದವರೇ. ಆದರೆ ಎರಡು ಹಲ್ಲುಗಳ ನಡುವಿನ ಅಂತರವನ್ನು ಕೊರೆಯುವ ಕಷ್ಟ ಕುರಿತು ಆಲೋಚಿಸಿರಲಿಲ್ಲ. ಮಿತ್ರರು ಪ್ರಾಚೀನ ಕಾಲದ ಬಾಚಣಿಗೆಯ ಮೂಲಕ ತಮ್ಮ ಬಾಳಿನ ಗತನೆನಪುಗಳಿಗೆ ಹೋದರು. ಜಗತ್ತಿನಾದ್ಯಂತ ಇರುವ ತಮ್ಮ ಸಮುದಾಯದಲ್ಲಿ ತಮ್ಮನ್ನು ಗುರುತಿಸಿಕೊಂಡರು. ನನಗಾದರೂ ಕಮ್ಮಾರಿಕೆಯ ವಸ್ತುಗಳನ್ನು ನೋಡುವಾಗ ಹೀಗೇ ಆಗುತ್ತದೆ.

ಅನೇಕ ಸಲ ಅಪಮಾನದ ಸಂಗತಿಗಳೂ ಜರುಗುತ್ತವೆ. ನಾಗಪುರದಲ್ಲಿದ್ದಾಗ ನನ್ನ ರೈಲು ಬರುವುದಕ್ಕೆ ಇನ್ನೂ ನಾಲ್ಕು ಗಂಟೆಯಿತ್ತು. ನಿಲ್ದಾಣದಲ್ಲಿದ್ದ ವಿಶ್ರಾಂತಿಯ ಕೊಠಡಿ ಬಾಡಿಗೆ ತೆಗೆದುಕೊಂಡೆ. ವಿಶಾಲ ಹಾಲಿನಲ್ಲಿ ಸಾಲಾಗಿ ಮಂಚಗಳು. ಪಕ್ಕದ ಮಂಚದಲ್ಲಿ ರೈಲ್ವೆ ಪರೀಕ್ಷೆಗೆ ಬರೆಯಲು ಒಬ್ಬಾತ ಬಿಹಾರದಿಂದ ಓದುತ್ತಿದ್ದನು. ಪರಸ್ಪರ ಪರಿಚಯ ಮಾಡಿಕೊಳ್ಳುವಾಗ ನಾನು ಬೌದ್ಧ ನವಯಾನ ಅಧ್ಯಯನ ಮಾಡಲು ಬಂದವನೆಂದು ತಿಳಿಸಿದೆ. ಆತ ತಟ್ಟನೆ 'ಮುಸ್ಲಿಂ ದೊರೆಗಳು ನಳಂದೆಯಲ್ಲಿ ಬೌದ್ಧರ ಗ್ರಂಥಾಲಯ ಸುಡದೆ ಹೋಗಿದ್ದರೆ, ಇವತ್ತು ಭಾರತದ ಸ್ಥಿತಿ ಅಮೆರಿಕಕ್ಕಿಂತ ಮೇಲೆ ಇರುತ್ತಿತ್ತು' ಎಂದನು. ಇದನ್ನು ನನಗೆ ಹೇಳಬೇಕೆಂದು ಅವನಿಗೆ ಯಾಕನಿಸಿತೊ? ದೇಹಚಾಚಿ ಮಲಗಿದೆ. ನಿದ್ದೆ ಬರಲಿಲ್ಲ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಚಾರಣದಲ್ಲಿ ಯಾವಾಗಲೂ ರಿಸ್ಕಿನಂಶ ಇರುತ್ತದೆ. ಉದುರಿದ ಎಲೆಗಳ ಅಡಿ ಮಲಗಿರುವ ವೈಪರ್ ಕಚ್ಚಬಹುದು. (ಹಾಗೆ ಕಚ್ಚಿಸಿಕೊಳ್ಳುವುದನ್ನು ಸ್ವಲ್ಪದರಲ್ಲಿ ನಾನು ತಪ್ಪಿಸಿಕೊಂಡಿದ್ದುಂಟು); ಹಿಮಾಲಯದ ಪಾರ್ಶ್ವ ಕುಸಿದು ಟೆಂಟಿನ ಮೇಲೆ ಬೀಳಬಹುದು. (ಕೇದಾರಕ್ಕೆ ಹೋಗುವಾಗ ನಮ್ಮ ಬಸ್ಸಿನ ಮುಂದೆಯೇ ದೊಡ್ಡದೊಂದು ಬಂಡೆ ಮೇಲಿನಿಂದ ಉರುಳಿಬಿದ್ದಿತು); ಬೇಸ್ ಕ್ಯಾಂಪಿಗೆ ಕಚ್ಚಾರಸ್ತೆಯಲ್ಲಿ ಹೋಗುವಾಗ ಬಸ್ಸು ಕಮರಿಗೆ ಬೀಳಬಹುದು; ಹಿಮಪಾತವಾದಾಗ ಆಮ್ಲಜನಕದ ಕೊರತೆಯಿಂದ ಉಸಿರುಗಟ್ಟಿ ಸಾವು ಬರಬಹುದು; ನದಿ ದಾಟುವಾಗ, ಜಲಪಾತ ನೋಡಲು ಕಣಿವೆಗೆ ಇಳಿವಾಗ ಕಾಲುಜಾರಿ ಬೀಳಬಹುದು. ಮೇಘಸ್ಫೋಟ ಮತ್ತು ಧಿಡೀರ್ ಪ್ರವಾಹ ಜಲಬಂಧನಕ್ಕೆ ಒಳಪಡಿಸಬಹುದು. ನಮ್ಮ ತಂಡದಲ್ಲಿದ್ದ ಒಬ್ಬ ತರುಣ ಅಸ್ಥಿರ ಕಲ್ಲಮೇಲೆ ಜಿಗಿದು ಕಾಲಿಟ್ಟು ಜಾರಲು, ದಿಂಡುರುಳಿದಂತೆ ಬಿದ್ದ ತಲೆ ಕಲ್ಲಿಗೆ ಬಡಿದು ಮರಣಿಸಿದ್ದುಂಟು. ಅದರಲ್ಲೂ ಹುಡುಗಿಯರಿದ್ದಾಗ ಅವರನ್ನು ಮೆಚ್ಚಿಸಲು ತರುಣರು ಮಾಡುವ ಸಾಹಸಗಳು ಪ್ರಾಣಘಾತಕವಾಗುತ್ತವೆ.

ಚಾರಣವನ್ನು ಆಯೋಜಿಸುವುದು ಯೂತ್ ಹಾಸ್ಟೆಲ್ಲಾದರೂ ಬರುವವರು ಹೆಚ್ಚಾಗಿ ಹಿರಿಯ ನಾಗರಿಕರು. ಮುದುಕರು ಮನೆಯಲ್ಲಿ ಕೂರದೆ ಯಾಕಪ್ಪಾ ಬಂದರು, ನಮ್ಮ ತಂಡ ವೇಗ ಕಳೆದುಕೊಳ್ಳುತ್ತದೆ ಎಂದು ತರುಣರು ಚಡಪಡಿಸುವರು. ಆದರೆ ಮನೆಯಲ್ಲಿ ಕೂರಬಾರದು ಎಂದೇ ಬಂದವರವರು.



ಅವರಲ್ಲಿ ಕೆಲವರಿಗೆ ತರುಣರಿಗಿಲ್ಲದ ಶಕ್ತಿ ಮತ್ತು ಅನುಭವ ಇರುತ್ತದೆ. ಚಂದ್ರಖಾನಿ ಚಾರಣದಲ್ಲಿ ನಾಸಿಕದ ಕಿಶೋರ್ ಶುಕ್ಲಾನನ್ನು ಅವನ ಅನುಭವದ ಮೇಲೆ ತಂಡದ ಲೀಡರ್ ಮಾಡಿದರು. ಆಗ ಒಬ್ಬ ತರುಣ 'ಅಂಕಲುಗಳನ್ನು ಲೀಡರ್ ಮಾಡಬೇಡಿ, ಅವರು ನಡೆಯಲಾಗದೆ ಹಿಂದುಳಿಯುತ್ತಾರೆ' ಎಂದನು. ಆಗ ಶುಕ್ಲಾ ಆರು ತಿಳಿಯರು ನನ್ನ ಭುಜಬಲದ ಪರಾಕ್ರಮ ಶೈಲಿಯಲ್ಲಿ 'ನನಗೆ ಹಿಂದಿಕ್ಕುವ ಗಂಡಸು ಈ ತಂಡದಲ್ಲಿ ಯಾರಿದ್ದೀರಿ' ಎಂದು ಗರ್ಜಿಸಿದನು. ಬಿಲ್ಲಿನಂತಿದ್ದ ಶುಕ್ಲಾ ಜಿಂಕೆಯಂತೆ ನಡೆಯುತ್ತಿದ್ದನು.


ನಾಸಿಕದಿಂದ ಮಂದಿದ್ದ ಮಿಸೆಸ್ ಕುಲಕರ್ಣಿ ಕೂಡ ಅಷ್ಟೇ. ಅವರಿಗೆ 70 ದಾಟಿತ್ತು. ನದಿ ದಾಟುವಾಗ ದುಂಡನೆಯ ಕಲ್ಲುಗಳನ್ನು ಹೆಕ್ಕಿ ಕಟ್ಟಿಕೊಳ್ಳುತ್ತಿದ್ದರು. ಇರುವ ಭಾರವನ್ನೇ ಹೊರಲು ಕಷ್ಟಪಡುವಾಗ, ಈ ಅಜ್ಜಿ ಕಲ್ಲು ಹೊರುತ್ತಿದೆಯಲ್ಲ ಎಂದು ಸಹಚಾರಣಿಗರು ಆಡಿಕೊಳ್ಳುತ್ತಿದ್ದರು. ಅಜ್ಜಿ ಎಂದೂ ಹಿಂದೆ ಬೀಳಲಿಲ್ಲ. ನಾಸಿಕಕ್ಕೆ ಹೋದಾಗ ಅಜ್ಜಿಯ ಮನೆಗೆ ಭೇಟಿ ಕೊಟ್ಟೆ. ಅದು ಮೂರನೇ ಚಾಳಿನಲ್ಲಿತ್ತು. ಇಕ್ಕಟ್ಟಾದ ಮೆಟ್ಟಿಲುಗಳನ್ನು ಹತ್ತಿಹತ್ತಿ ಅಜ್ಜಿಗೆ ಪರ್ವತಾರೋಹಣದ ತರಬೇತಿ ಸಿಕ್ಕಿದೆ ಅನಿಸಿತು. ಸಂಸಾರವಿಲ್ಲದ ಆಕೆ ಕಾಡುಮೇಡು ತಿರುಗಾಡುತ್ತ ಒಂಟಿತನ ನೀಗಿಸಿಕೊಳ್ಳುತ್ತಿದ್ದರು. ವೃದ್ಧರು ವಯಸ್ಸು ಮತ್ತು ಸಾವು ಹಾಕುವ ಬೆದರಿಕೆಯನ್ನು ಸವಾಲಾಗಿ ಸ್ವೀಕರಿಸಲೆಂದೇ ಬಂದಂತೆ ತೋರುತ್ತಿತ್ತು. ಮಹಿಳೆಯರಿಗೆ ಸಮಾಜ ನಿನಗಿದು ಆಗಲ್ಲ ಎಂದು ಹೇಳಿಹೇಳಿ ಮಾನಸಿಕವಾಗಿ ಕುಗ್ಗಿಸಿರುತ್ತದೆ. ಅವರದನ್ನು ಹುಸಿಗೊಳಿಸಲೆಂದೇ ಬಂದಿರುತ್ತಾರೆ. ಶರಾವತಿ ಕಣಿವೆಯಲ್ಲಿ ಬರುವ ದಬ್ಬೆ ಜಲಪಾತಕ್ಕೆ ಇಳಿದ ಘಟನೆ ನೆನಪಾಗುತ್ತಿದೆ. ಜಾರಿಬೀಳುವ ಸಾಧ್ಯತೆಯಿದ್ದ ಕಡಿದಾದ ಹಾದಿಯದು. ಅನೇಕ ಪುರುಷರು ಜಾನ್ ಹೋತೊ ಜಹಾನ್ ಹೈ ತತ್ವದ ಪ್ರಕಾರ ಬಾರದೆ ಉಳಿದರು. ಆದರೆ ಅವರ ಮಡದಿಯರು ಆಗಿದ್ದಾಗಲಿ ಎಂದು ಇಳಿದರು.

ನಗರೋಣಿಯಲ್ಲಿ ಹಿಮಪಾತಕ್ಕೆ ಸಿಲುಕಿದಾಗಲೂ ನಮಗೆ ಮೈಯೆಲ್ಲ ಮರಗಟ್ಟಿ ಸಾವಿಗೆ ಸಮೀಪ ಎನಿಸಿತು. ಆದರೂ ಸಾವಿಗಂಜದೆ ಅಲ್ಲಿನ ಜನ ಬಸ್ಸು ಚಲಾಯಿಸುವರು. ಯಾತ್ರಿಕರು ಬರುವರು. ಚಾರಣಕ್ಕೆ ಯಾತ್ರೆಗೆ ಸಾವನ್ನು ಹೆದರಿಸುವ ಮೃತ್ಯುಂಜಯ ಗುಣವೂ ಇರಬಹುದು.

ಕೆಲವರು ಆನುವಂಶಿಕತೆಯಿಂದಲೊ ಜೀವನಶೈಲಿಯಿಂದಲೊ ಬಂದಿರುವ ಸ್ಥೂಲಕಾಯ ನಿಯಂತ್ರಿಸಲು ಚಾರಣಕ್ಕೆ ಬರುವುದುಂಟು. ಅರಾವಳಿಗೆ ಬಂದಿದ್ದ ಒಬ್ಬ, ತಂಡವು ಅಧಿಕೃತವಾಗಿ ನಡಿಗೆ ಶುರುಮಾಡುವ ಮುನ್ನ ಮತ್ತು ನಡಿಗೆ ಮುಗಿಸಿ ಕ್ಯಾಂಪ್ ತಲುಪಿದ ಬಳಿಕ ವ್ಯಾಯಾಮ ಮಾಡುತ್ತಿದ್ದನು. ಅವನಿಗೆ ತನ್ನ ದೇಹ ಪರ್ವತದಂತೆ ಬೆಳೆಯುವುದನ್ನು ನಿಲ್ಲಿಸಬೇಕಿತ್ತು. ದೇಹ ಕರಗಿಸದೆ ಕೈಹಿಡಿಯಲಾರೆ ಎಂದು ಗರ್ಲ್‌ಫ್ರೆಂಡ್ ಶರತ್ತು ಹಾಕಿದ್ದಳು. ಹೇಮಕುಂಡದ ಚಾರಣಕ್ಕೆ ಬಂದ ಒಬ್ಬ ಸ್ಥೂಲಕಾಯದ ತರುಣನಿಗೆ ದೇಹ 14 ಸಾವಿರ ಅಡಿಯ ಬಳಿಕ ತಲೆಸುತ್ತು ಬಂತು. ತಕ್ಷಣವೇ ಅಲ್ಲಿದ್ದ ಬೇರೆಬೇರೆ ಜನರು ತಮ್ಮ ಬ್ಯಾಗುಗಳನ್ನು ಬಿಚ್ಚಿ ಮದ್ದನ್ನು ಕೊಡಲು ಯತ್ನಿಸಿದರು. ಒಬ್ಬರೆಂದರು: 'ಕೂಡಲೇ ಕೆಳಗೆ ಇಳಿದು ಅಥವಾ ನಿಂತು ಸುಧಾರಿಸಿಕೊಳ್ಳಿ. ಹೃದಯಕ್ಕೆ ಆಮ್ಲಜನಕ ಸಿಗುತ್ತಿಲ್ಲ. ವಿಶ್ರಾಂತಿಕೊಟ್ಟರೆ ಅದು ಸುಧಾರಿಸಿಕೊಳ್ಳುತ್ತದೆ. ಸಾಧ್ಯವಾದರೆ ಕುದುರೆ ತಗೊಳ್ಳಿ.' ವಯಸ್ಕರೆಲ್ಲ ನಡೆಯುತ್ತಿರುವಾಗ ತಾನು ಕುದುರೆಯೇರಲು ಅವನಿಗೆ ನಾಚಿಕೆ. ಆದರೆ ಅನಿವಾರ್ಯವಾಗಿತ್ತು.

ನನಗಾದರೂ ಭೂತಾನದಲ್ಲಿ ಒಂದು ಪರ್ವತವನ್ನು ಏರುವಾಗ, ಅದರ ಶಿಖರ ಮುಟ್ಟಿ ಬರಬೇಕೆಂದು ಏರಿದೆ. ದೇಹ ಸಹಕರಿಸಲಿಲ್ಲ. ಹಠಬಿಟ್ಟು ಕೆಳಗಿಳಿದೆ. ನಿಸರ್ಗ ಸಾಹಸಕ್ಕೆ ಪ್ರಚೋದಿಸುತ್ತದೆ; ಜತೆಗೆ ಸಾಹಸಿಗಳಿಗೆ ಅವರ ಮಿತಿಯನ್ನೂ ಕಾಣಿಸುತ್ತದೆ. ಒಮ್ಮೆ ಚಾರಣದಲ್ಲಿ ಮುಬೈನಿಂದ ಒಬ್ಬ ಮಹಿಳೆ ಮೊದಲನೇ ದಿನದ ದೈಹಿಕ ಪರೀಕ್ಷೆಯಲ್ಲಿ ನಪಾಸಾದರು. ಅಧಿಕಾರಿಗಳಿಗೆ ಅವರನ್ನು ಬೇಸ್ಕ್ಯಾಂಪಿನಲ್ಲಿ ಬಿಟ್ಟುಹೋಗುವುದು ಒಳಿತು ಅನಿಸಿತು. ಆದರೆ ಆಕೆ ಕಾಡಿಬೇಡಿ ಬಂದರು. ಎಲ್ಲರಿಗಿಂತ ಚೆನ್ನಾಗಿ ನಡೆದರು. ಕೌಟುಂಬಿಕ ಬದುಕು ಕಟ್ಟಿಹಾಕಿ ಕಳೆದ ಎಲ್ಲವನ್ನು ಪಡೆಯಲೆಂಬಂತೆ ಮಹಿಳೆಯರು ಸಮುದ್ರ ಕಡಲು ಕಾಡು ನದಿಗಳಲ್ಲಿ ಬೆರೆಯುವರು.

ಹವಾಯಿ ಚಪ್ಪಲಿಯಲ್ಲಿ, ಬರಿಗಾಲಲ್ಲಿ ಚಳಿನಿರೋಧಕ ವಸ್ತುಗಳಿಲ್ಲದೆ ಜನ ಭಕ್ತಿಯಿಂದ ಕೇದಾರದಲ್ಲಿ ಯಮನೋತ್ರಿಯಲ್ಲಿ ಹೇಮಕುಂಡ ಸಾಹೇಬದ ಹಾದಿಗಳಲ್ಲಿ ನಡೆದು ಬರುವಾಗ, ಮೈತುಂಬ ರಕ್ಷಣಾತ್ಮಕ ದಿರಿಸುಹಾಕಿ ಅಂತರಿಕ್ಷಯಾನಿಗಳಂತಿದ್ದ ನಮಗೆ ನಾಚಿಕೆಯಾಗುತ್ತಿತ್ತು. ಒಬ್ಬ ಅಜ್ಜ ತನ್ನ ಮಡದಿಯ ಕೈಹಿಡಿದು ಕೇದಾರ ಏರುತ್ತಿದ್ದುದು ನೆನಪಾಗುತ್ತಿದೆ. ಚಾರಣವು ಹಿಂದೆ ಬಿದ್ದವರನ್ನು ಬಿಟ್ಟು ನಮ್ಮಷ್ಟಕ್ಕೆ ನಾವೇ ಗುರಿ ತಲುಪಲು ಹೇಳುವುದಿಲ್ಲ.



ಕಾದು ಕಷ್ಟದಲ್ಲಿರುವವರನ್ನು ಜತೆಯಲ್ಲಿ ಕರೆದುಕೊಂಡು ಹೋಗಲು ಪ್ರೇರಿಸುತ್ತದೆ. ಚಾರಣಕ್ಕೆ ಬಂದಿರುವುದು ಸ್ಪರ್ಧೆಗಲ್ಲ, ಗೆಲ್ಲುವುದಕ್ಕಲ್ಲ. ಎಲ್ಲರ ಜತೆಗೂಡಿ ನಡೆಯುವುದಕ್ಕೆ. ಹಾಗೆ ನಡೆಯುವಾಗ ತೆರೆಯುವ ಎದೆಸಂದೂಕದೊಳಗಿನ ನೋವುನಲಿವು ಹಂಚಿಕೊಳ್ಳುವುದಕ್ಕೆ ಎಂದು ಸೂಚಿಸುತ್ತದೆ. ಶ್ರದ್ಧೆ ಛಲವಿದ್ದರೆ ಚಾರಣದ ಕಷ್ಟಗಳು ಏನೂ ಅಲ್ಲ. ಚಾರಣ ಪ್ರಕೃತಿಯ ಸಾನಿಧ್ಯದಲ್ಲಿ ಹಳೆಯದೆಲ್ಲವನ್ನು ಮರೆತು ಪ್ರೀತಿತೋರಲು ಪ್ರೇರಿಸುತ್ತದೆ. ತಲೋಟಿ ಎಂಬಲ್ಲಿ ಜಾಡುತೋರುಗರು ಹಿಮಪಾತದಿಂದ ಜೀವಚ್ಛವವಾಗುತ್ತಿದ್ದ ನಮ್ಮನ್ನು ಕಣಿವೆ ದಾಟಿಸುವಾಗ, ನಮ್ಮ ಕೈಗಳನ್ನು ಬಿಗಿಯಾಗಿ ಹಿಡಿದ ಬಿಸುಪು ಈಗಲೂ ನೆನಪಾಗುತ್ತದೆ. ನೀರಿನಲ್ಲಿದ್ದಾಗ ಅಂಬಿಗರು ಇದೇ ಬಗೆಯ ಜೀವದ ಹಂಗುತೊರೆದು ಪಯಣಿಗರನ್ನು ಉಳಿಸುವರು.

ದೇಶದ ಹಲವು ಭಾಷೆ ಪ್ರದೇಶ ಜಾತಿ ಧರ್ಮದ ಜನರು ಒಟ್ಟಿಗೆ ಪ್ರಕೃತಿಯಲ್ಲಿ ನಡೆಯುವಾಗ ರಾಷ್ಟ್ರೀಯ ಐಕ್ಯಭಾವ ಉಂಟಾಗುತ್ತದೆ ಎಂಬುದು ಯೂತ್ ಹಾಸ್ಟೆಲಿನ ಆಶಯ. ಆದರೆ ಭಾಷೆ ಪ್ರದೇಶ ಜಾತಿ ಧರ್ಮ ವಿಚಾರಧಾರೆಗಳು ಗುಂಪುಗಳನ್ನು ಸೃಷ್ಟಿಸುತ್ತವೆ. ಆದರೆ ಗುಂಪುಗಾರಿಕೆ ಸೀಳಿಕೊಂಡು ಸಮಾನ ಸಮಾನಮನಸ್ಕತೆ ಆಪ್ತವಾದ ಹಂಚಿಕೊಳ್ಳುವಿಕೆಗೆ ಪ್ರಚೋದಿಸುತ್ತವೆ. ಕ್ಯಾನ್ಸರ್ ಸ್ಪೆಶಲಿಸ್ಟ್ ಆಗಿದ್ದ ವೈದ್ಯರೊಬ್ಬರ ಜತೆಗಿನ ಮಾತುಕತೆ ನೆನಪಾಗುತ್ತಿದೆ. ಮರಣಶಯ್ಯೆಯಲ್ಲಿರುವ ರೋಗಿಗಳನ್ನು ಮುಖಾಮುಖಿ ಮಾಡುವ ಅವರ ಅನುಭವ ದಂಗುಬಡಿಸಿತು. ಬೇರೆಬೇರೆ ವೃತ್ತಿಯಲ್ಲಿರುವವರು ತಮ್ಮ ಅನುಭವ ಹೇಳಿಕೊಳ್ಳುವುದಕ್ಕೆ ಹಂಚಿಕೊಳ್ಳುವುದಕ್ಕೆ ಚಾರಣ ವೇದಿಕೆ ಒದಗಿಸುತ್ತದೆ. ವಿಚಾರ ಮತ್ತು ಅನುಭವ ಹಂಚಿಕೆಯನ್ನು ಸಮೃದ್ಧಗೊಳಿಸುತ್ತದೆ. ವೈಚಾರಿಕ ಭಿನ್ನಮತ ವಾದವಿವಾದ ಹುಟ್ಟಿಸುತ್ತದೆ. ರಾಜಕೀಯ ಚರ್ಚೆಗಳು ಕಲಹದಲ್ಲಿ ಮುಗಿಯುತ್ತವೆ. ಪುಣೆಯವರು ಹಾಡುತ್ತಿದ್ದ ಸಾವರ್ಕರ್ ಹಾಡುಗಳು ತಂಡವನ್ನು ವಿಭಜಿಸಿದ್ದುಂಟು. ಶರಾವತಿ ಚಾರಣದಲ್ಲಿ ಆಹಾರದ ಚರ್ಚೆ ಎದ್ದಾಗ, ಚರ್ಚೆಯಲ್ಲಿ ಒಬ್ಬನು ಮಾಂಸಾಹಾರ ತಾಮಸವೆಂದೂ ಸಸ್ಯಾಹಾರ ಸಾತ್ವಿಕವೆಂದೂ ಘೋಷಿಸಿದನು. ನಾನು ಸಸ್ಯಾಹಾರವಾದವು ದೇಶದಲ್ಲಿ ಆಹಾರದ ಹಿಂಸೆ ಸೃಷ್ಟಿಸಿರುವುದನ್ನು ಹೇಳಿದೆ. ನನ್ನನ್ನು ಬೆಂಬಲಿಸಿದವರು ಮಾಂಸಾಹಾರ ಮಾಡದ ಮೇಲ್ಜಾತಿಯ ಚಾರಣಿಗರು. ಚಾರಣ, ದೇಹಕ್ಕೆ ಮಾತ್ರವಲ್ಲ ಚಿಂತನೆಗೂ ಸಾಣೆ ಹಿಡಿಯಬಲ್ಲದು.

ಅನೇಕರು ತಾವಿರುವ ಊರುಮನೆಯ ಪರಿಸರದಲ್ಲೇ ಸುಖ ಕಾಣುತ್ತಾರೆ. ಮತ್ತೆ ಕೆಲವರು ಹೊಸ ಜಾಗಗಳು ಕೊಡುವ ಹೊಸ ಅನುಭವ ಹೊಸನೋಟಕ್ಕೆ ಹಾತೊರೆಯುತ್ತಾರೆ. ನಾನಾದರೂ ನಿರ್ಗಮಿಸುವುದರ ಒಳಗೆ ಲೋಕವನ್ನು ಸಾಧ್ಯವಾದಷ್ಟೂ ನೋಡಬೇಕೆಂದು ಬಯಸುವವನು. ಭಾರತಕ್ಕೆ ಬಂದಿದ್ದ ವಿದೇಶಿ ಪ್ರವಾಸಿಗರಲ್ಲೂ ಈ ಕುತೂಹಲವಿತ್ತು. ಅವರು ಪಡೆದ ಜ್ಞಾನ ಅನುಭವವನ್ನು ತಮ್ಮ ನಾಡಿಗೆ ಹೋಗಿ ಹಂಚಿರಬಹುದು. ಹಂಚದೆ ತಾವಷ್ಟೆ ಉಂಡಿರಲೂಬಹುದು. ಆದರೆ ಅನುಭವಕ್ಕಾಗಿ ಅವರು ಪಟ್ಟಪಾಡು ನೆನೆದರೆ ಸೋಜಿಗವಾಗುತ್ತದೆ. ಆದರ ಮೂಡುತ್ತದೆ.

ಚಾರಣ ಪ್ರವಾಸ ಯಾತ್ರೆಗಳು ಎಷ್ಟೇ ಹೊಸ ಅನುಭವ ಕೊಡಲಿ. ಒಂದು ಹಂತದಲ್ಲಿ ಬೇಸರದಿಂದ ಬಿಟ್ಟುಬಂದ ಮನೆ ಊರು ಕಾಡತೊಡಗುತ್ತದೆ. ಯಾವಾಗ ನಮ್ಮ ಮನೆ ಸೇರಿ ಮನೆಯೂಟ ಮಾಡಿಯೇವೊ ಅನಿಸುತ್ತದೆ. ನಾವು ಜತೆಗೊಯ್ಯುವ ಊಟ ಚಟ್ನಿ ಫೋನು ಕೂಡ ಈ ನೆನಪುಗಳ ಭಾಗವೇ. ಮನೆಯ ಊರಿನ ಮಹತ್ವ ಅರಿವಾಗಲೆಂದೇ ಪ್ರವಾಸ ಹೋಗುತ್ತೇವೆಯೊ ಏನೊ? ಜತೆಯಿಲ್ಲಿದ್ದಾಗ ದಣಿವೆನಿಸುವ ಸಹಪ್ರೇಮಿಗಳು ಅಗಲಿದಾಗ ವಿರಹ ಹುಟ್ಟಿಸುವರು. ನಮ್ಮ ತಂಡದವರು ಹಿಮಾಲಯವನ್ನು ಇಳಿದ ಕೂಡಲೇ ಡೆಹ್ರಾಡೂನಿನ ಮಾಂಸಾಹಾರಿ ಹೋಟೆಲಿಗೆ ಹೋಗಿ, ಶತಮಾನದ ಕಾಲ ಮಾಂಸ ಉಂಡೇಯಿಲ್ಲವೇನೊ ಎಂಬಂತೆ ತಿಂದದ್ದುಂಟು.

**ಗಗನದಿಂದ ಮೇಲೆ ಅನುಭಾವ ತಾನಿಲ್ಲ**
**ಒಳಗಣ ಜ್ಯೋತಿಯ ಬೆಳಗಬಲ್ಲವರಿಲ್ಲ**
**ಹೊರಗಣ ಹೊರಗನು ಅರಿಯಬಲ್ಲವರಿಲ್ಲ**
**ಹಿಂದಣ ಹಿಂದನು, ಮುಂದಣ ಮುಂದನು**
**ತಂದು ತೋರಿದ ನಮ್ಮ ಗುಹೇಶ್ವರ**

**– ಅಲ್ಲಮ ಪ್ರಭು**

## ಅಲ್ಲಮ ಪ್ರಭು ವಚನ ವಿಶ್ಲೇಷಣೆ

ಏಕತಾವಾದ,ತತ್ವಶಾಸ್ತ್ರ, ಅಧ್ಯಾತ್ಮದಲ್ಲಿ ಸಮಾಜಿಕ ಸಮಾನತೆ, ವೀರಶೈವ ಲಿಗಾಯತ ಧರ್ಮಕ್ಕೆ ಒತ್ತು, ಶಿವಾರಾಧಕ, 12ನೇ ಶತಮಾನದ ಬಸವಣ್ಣ ಮತ್ತು ಅಕ್ಕಮಹಾದೇವಿಯರ ಕಾಲದ ಸಂತ, ಸಮಾಜಿಕ ಸುಧಾರಣೆಯ ಕ್ರಾಂತಿಕಾರಿ, ಕಲ್ಯಾಣದ ಅನುಭವ ಮಂಟಪದ ಮುಖ್ಯ ರುವಾರಿ ಶ್ರೀ ಗುರು ಅಲ್ಲಮ ಪ್ರಭುಗಳ ಕಾವ್ಯನಾಮ "ಗುಹೇಶ್ವರ"

ವಚನಗಳ ಮೂಲಕ ಮೂಢನಂಬಿಕೆಯ ಸಾಂಪ್ರದಾಯಿಕ ಪದ್ಧತಿಯನ್ನು ವಿರೋದಿಸಿ, ಭಕ್ತಿ, ಭಾವ, ಶಿವ, ಶ್ರದ್ಧೆಯ ಕಾಯಕ, ಅನುಭವ, ಅನುಭಾವಕ್ಕೆ ಮಹತ್ವ ಕೊಟ್ಟ ಮಹಾ ಪುರುಷ.



ಲಕುಮಿಸುತ ಸಾರವಾಡ
ಹೊಸಪೇಟೆ

Scan For Digital Colourful
HAMPI TIMES E-paper

ಅನುಭಾವ – ಆತ್ಮವು ಪರಮಾತ್ಮನೊಂದಿಗೆ ಒಂದಾಗ ಋಷಿಗಳು, ಸಂತರು,ಮಹಾತ್ಮರು, ಸಾಧಕರು, ವಚನಕಾರರು, ರಚಿಸಿದ ರಚನೆಗಳು ಮೆಲುನೋಟಕ್ಕೆ ಅರ್ಥವಾದಂತಿದ್ದರೂ ಅದರ ಒಳಾರ್ಥವು ಬೇರೆಯದೆ ಇರುತ್ತದೆ. ಚಿಂತಕರು, ವಿಶ್ಲೇಷಕರು ಅದನ್ನು ಅವರವರ ಶೈಲಿಯಲ್ಲಿ ಬಿಡಿಸಿ ವಾಚಕರಿಗೆ ಉಣಬಡಿಸುತ್ತಾರೆ.

12 ನೇ ಸಾಲಿನ ಬಸವಣ್ಣ, ಅಕ್ಕಮಹಾದೇವಿಯವರ ಕಾಲ ಘಟ್ಟದಲ್ಲಿ ಅಲ್ಲಮಪ್ರಭು ಅವರು ಇಂದ್ರಿಯಗಳಿಗೂ ಮೀರಿ ಗ್ರಹಿಸುವ ಸೂಕ್ಷ್ಮ ಸಂವೇದನಾಶೀಲತೆ ಹೊಂದಿದ ಅತೀಂದ್ರಿಯ ಅನುಭವಿ, ಸಾಮಾಜಿಕ ಕ್ರಾಂತಿಕಾರಿ ಸಂತ. ಇವರ ವಚನಗಳು ಸುಮಾರು 1200ಕ್ಕು ಹೆಚ್ಚು ದೊರೆತಿವೆ ಎಂದು ಹೇಳಲಾಗುತ್ತಿದೆ.

ಇವರ ವಚನಗಳನ್ನು ಗಮನಿಸಿದಾಗ, ಏಕತಾವಾದ, ತತ್ವಶಾಸ್ತ್ರ, ಅದ್ಯಾತ್ಮಿಕ ಚಿಂತನೆಯೊಂದಿಗೆ ಸಮಾನತೆಗಾಗಿ ವೈದಿಕ ಸಂಪ್ರದಾಯವನ್ನು ಅಲ್ಲಗಳೆದು ಭಕ್ತಿ, ಜ್ಞಾನ ವೈರಾಗ್ಯಕ್ಕೆ ಮಹತ್ವ ಕೊಟ್ಟು, ದೇಹವೇ ದೇಗುಲವೆಂದು ಸಾರಿ ಹೇಳಿದರು. ಲಿಂಗ–ಶಿವ ಭಕ್ತರು. ಅಂತೆಯೆ ಇವರ ಕಾವ್ಯ ನಾಮ ಗುಹೇಶ್ವರ ಎಂದಿರಬಹುದು.

ಪೃಥ್ವಿ, ಜಲ, ಅಗ್ನಿ, ವಾಯು, ಮತ್ತು ಆಕಾಶ ಎಂಬ ಪಂಚಮಹಾಭೂತಗಳಿಂದ ಮನುಜರನ್ನೂ ಸೃಷ್ಟಿಸಿ, ಜನ್ಮದಿಂದಲೇ ಷಡ್ಗುಣಗಳೊಂದಿಗೆ ಪಂಚೇಂದ್ರೀಯ ಗಳನ್ನೂ ದಯಪಾಲಿಸಿದ. ಸದ್ಧರ್ಮದಿಂದ ಸತ್ಕರ್ಮ ಮಾಡುತ್ತ ಜೀವನ ಸಾಗಿಸಬೇಕಾದ ಮನುಜ, ತನ್ನಿಷ್ಟದಂತೆ ಜಾತಿ, ಮೇಲು, ಕೀಳು ಮೋಸ ವಂಚನೆಯಿಂದ ಕೂಡಿ ಧರ್ಮದ ದಾರಿಯನ್ನೇ ಮರೆತ. ಅಂತಹ ಸಂಧರ್ಭದಲ್ಲಿ ಶಿವಾವತಾರಿಯಾದ ಅಲ್ಲಮಪ್ರಭು ಸಂತರೂಪದಲ್ಲಿ ಬಂದು ಲಿಂಗದ್ವೈವತ್ವಜ ಬೀಜ ಬಿತ್ತಿದರು. ಪಂಚಬೂತಗಳಲ್ಲಿ ಆಕಾಶವೇ ಮೇರು. ಅದಕ್ಕಿಂತ ಮಿಗಿಲಾದದ್ದು ಮತ್ತೊಂದಿಲ್ಲ. ಆತ್ಮನು ಪರಮಾತ್ಮನೊಂದಿಗೆ ಬೆರೆಯುವದೇ ಅನುಭಾವ. ಹ್ಯಾಗೆ ಆಕಾಶಕ್ಕಿಂತ ಮಿಗಿಲಾದದ್ದು ಯಾವುದು ಇಲ್ಲವೋ ಹಾಗೆ ಅದ್ಯಾತ್ಮಿಕತೆ ಯಲ್ಲಿ ಯಾವನು ಅನುಭಾವ ಹೊಂದು ವನೋ ಅವನು ಗಗನಕ್ಕೆ ಸಮಾನ. ಇದುವೇ ನಮ್ಮೊಳಗಿರುವ ಆತ್ಮ ಜ್ಯೋತಿ. ಈ ಜ್ಯೋತಿಯನ್ನು ನಾವೇ ಹಚ್ಚಿಕೊಳ್ಳಬೇಕೇ ವಿನಃ ಬೇರೆ ಇನ್ಯಾರೂ ಬೆಳಗಿಸಲಾರರು. ಅಂದರೆ ನಾವು ಉದ್ದಾರವಾಗ ಬೇಕಾದರೆ ನಾವೇ ಜ್ಞಾನ ಸಂಪಾದಿಸಿ, ನಮ್ಮ ಕಾಯಕವನ್ನು ನಾವೇ ಮಾಡಬೇಕು. ಅದು ಇನ್ನೊಬ್ಬರಿಂದ ಪಡೆದುಕೊಳ್ಳುವುದಲ್ಲ. ಮೇಲ್ನೋಟಕ್ಕೆ ಸರಳ ಸಜ್ಜನನಾಗಿ ಕಂಡರೂ ಆಂತರಿಕವಾಗಿ ದುರ್ನಡತೆಯುಳ್ಳವನಾಗಿದ್ದರೆ, ಅಂದರೆ ಒಳಗೊಂದು, ಹೊರಗೊಂದು ಗುಣಹೊಂದಿ ಡಾಂಬಿಕನಾಗಿದ್ದರೆ ಅರಿಯುವುದು ಕಷ್ಟ ಸಾದ್ಯ. ಇಂಥವರು ತಮ್ಮ ಸ್ವಂತಕ್ಕೂ ಸಮಾಜಕ್ಕೂ ಅಪಾಯಕಾರಿ. ಅದ್ಯಾತ್ಮಿಕ ಅನುಭಾವನ್ನು



ಪಡೆದದ್ದೇಯಾದರೆ ನಮ್ಮ ಹಿಂದಿನ, ಪ್ರಸುತ, ಮತ್ತು ಮುಂದೆ ಆಗಬಹುದಾದ ಎಲ್ಲವನ್ನೂ ಶಿವ ಅರಿವನ್ನು ನೀಡುತ್ತಾನೆ. ಢಾಂಬಿಕತನವನ್ನು ಬಿಟ್ಟು, ತನ್ನ ಅಂತರಾತ್ಮದ ಅದ್ಯಾತ್ಮಿಕ ಬೆಳಕನ್ನು ಕಂಡುಕೊಳ್ಳುತ್ತ, ತನಗೊದಗಿ ಬಂದ ಕಾಯಕವನರಿತು, ಲಿಂಗದೊಳಗೊಂದಾಗುವ ಅನುಭಾವ ಪ್ರಾಪ್ತಿ ಮಾಡಿಕೊಂಡರೆ, ಶಿವ ಕರುಣೆಯಿಂದ ಹಿಂದು ಮುಂದಿನ ಜ್ಞಾನ ಪಡೆಯುವಿ ಎಂಬದನ್ನು ಸೂಚಿಸುವ ಭಾವ ಈ ವಚನದಲ್ಲಿದೆ.

## ಜಲದ ಬಳಕೆ ಮಿತವಾಗಿರಲಿ ಪುರಸಭೆ ಮನವಿ

**ಹಂಪಿ ಟೈಮ್ಸ್ ಹೊಸಪೇಟೆ**

ಹಗರಿಬೊಮ್ಮನಹಳ್ಳಿಯ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ತುಂಗಭದ್ರ ನದಿಯಲ್ಲಿ ನೀರಿನ ಮಟ್ಟ ತೀರ ಕಡಿಮೆಯಾಗಿದ್ದು ಬನ್ನಿಗೊಳ ಜಾಕ್‌ವೆಲ್‌ನಲ್ಲಿ ಕುಡಿಯುವ ನೀರಿನ ಪೂರೈಕೆಗೆ ಅಭಾವ ಉಂಟಾಗಿರುವುದರಿಂದ ನೀರನ್ನು ಪಟ್ಟಣಕ್ಕೆ ಸರಬರಾಜು ಮಾಡಲು ತುಂಬಾ ತೊಂದರೆ ಯಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಕುಡಿಯುವ ನೀರನ್ನು ಮಿತವಾಗಿ ಬಳಸಬೇಕು. ವಿನಾಕಾರಣ ನೀರನ್ನು ವ್ಯರ್ಥಮಾಡಬಾರದು. ಹಾಗೂ ನೀರನ್ನು ಕಾಯಿಸಿ, ಕುದಿಸಿ, ಆರಿಸಿ ಕುಡಿಯಬೇಕು. ಆದಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳ ಮೂಲಕ ನೀರನ್ನು ಬಳಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

## ಆಕ್ಷೇಪಣೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದ ವಾರ್ಡ್ ನಂ.24 ಸಿರಿಸಿನಕಲ್ಲು ಶ್ರೀಮತಿ ಶಾಜದ್ ಬೀ ಗಂಡ ಮೊಹಮ್ಮದ್ ಗೌಸ್ ರವರ ಅಸೆಸ್ಮೆಂಟ್ ನಂ.814 ಡೋರ್ ನಂ.814ನ್ನು ಫೆ.13ರಂದು ವಾರ್ಡ್ ನಂ.24 ಸಿರಿಸಿನಕಲ್ಲು ಶ್ರೀಮತಿ ಶಾಜದ್ ಬೀ ಗಂಡ ಮೊಹಮ್ಮದ್ ಗೌಸ್ ರವರು ನಮೂನೆ–03 ನೀಡಲು ಅರ್ಜಿ ಸಲ್ಲಿಸಿದ್ದು, ನಗರಸಭೆ ಸನ್ 1999–2002ನೇ ಸಾಲಿನಲ್ಲಿ ಶ್ರೀಮತಿ ಶಂಶಾದ್ ಗಂಡ ಗೌಸ್ ಸಾಬ್ ಎಂದು ಆಗಿದ್ದು, ಸದರಿ ಶಾಜದ್ ಬೀ ಗಂಡ ಮೊಹಮ್ಮದ್ ಗೌಸ್ ಅವರ ಆಧಾರ್ ಕಾರ್ಡ್ ಸಂಖ್ಯೆ:3859 8309 9253 ನಲ್ಲಿ ಹೆಸರು ಶ್ರೀಮತಿ ಶಾಜದ್ ಬೀ ಗಂಡ ಮೊಹಮ್ಮದ್ ಗೌಸ್ ಎಂದು ಇರುತ್ತದೆ. ಪ್ರಸ್ತುತ ಇರುವ ಹೆಸರಿನಲ್ಲಿ ನಮೂನೆ–03 ನೀಡಲು ಯಾರಿಗಾದರೂ ಆಕ್ಷೇಪಣೆಗಳಿದ್ದಲ್ಲಿ 7 ದಿನಗಳೊಳಗಾಗಿ ಮಾನ್ಯ ಪೌರಾಯುಕ್ತರು ನಗರಸಭೆ ಹೊಸಪೇಟೆ ಇವರಿಗೆ ಸಲ್ಲಿಸತಕ್ಕದ್ದು ಎಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೋಟಗಾರಿಕೆ ತರಬೇತಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2023–24ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2024 ಮೇ 2ರಿಂದ 2025 ಫೆ. 28 ರವರೆಗೆ 10 ತಿಂಗಳ ವಿಜಯನಗರ ಜಿಲ್ಲೆಯ ರೈತ ಮಕ್ಕಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿಬೇಕು. ಪ್ರವೇಶ ಬಯಸುವ ಅಭ್ಯರ್ಥಿಯ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಅರ್ಜಿಗಳನ್ನು ಮಾ.1. ರಿಂದ ಮಾ.30.ರವರೆಗೆ ತೋಟಗಾರಿಕೆ ಇಲಾಖೆಯ ವೆಬ್ ಸೈಟ್ https://horticulturedir.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದ್ದು, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಹೊಸಪೇಟೆ ಕಚೇರಿಗೆ ಸಲ್ಲಿಸಲು ಏಪ್ರಿಲ್ 1 ಕೊನೆಯ ದಿನವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ವಿಕಲಚೇತನರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಟ 33 ವರ್ಷ, ಮಾಜಿ ಸೈನಿಕರಿಗೆ 33 ರಿಂದ ಗರಿಷ್ಠ 65 ವರ್ಷ ಹಾಗೂ ಸಾಮಾನ್ಯ ವರ್ಗದವರಿಗೆ ಕನಿಷ್ಠ 18 ವರ್ಷ ಗರಿಷ್ಠ 30 ವರ್ಷ ವಯೋಮಿತಿ ಹೊಂದಿರಬೇಕು.

## ಕನಕಗಿರಿ ಉತ್ಸವ: ಕ್ಯೂಆರ್ ಕೋಡ್ ಬಿಡುಗಡೆ

**ಹಂಪಿ ಟೈಮ್ಸ್ ಕೊಪ್ಪಳ**

ಕನಕಗಿರಿ ಉತ್ಸವ- 2024

ಮಾರ್ಚ್ 02 ಮತ್ತು 03 ರಂದು ಜಿಲ್ಲೆಯ ಕನಕಗಿರಿಯಲ್ಲಿ ನಡೆಯಲಿರುವ ಕನಕಗಿರಿ ಉತ್ಸವ–2024 ದಲ್ಲಿನ ಕಾರ್ಯಕ್ರಮಗಳು, ಕ್ರೀಡಾಕೂಟಗಳು ಸೇರಿದಂತೆ ಹೆಚ್ಚಿನ ಮಾಹಿತಿ ಪಡೆಯಲು ಜಿಲ್ಲಾ ಎನ್‌ಐಸಿ ಇಂದ ಕ್ಯೂಆರ್ ಕೋಡ್ ಅನ್ನು ರಚಿಸಲಾಗಿದ್ದು, ಉತ್ಸವದ ಕುರಿತು ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಬಹುದು ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಕೊಪ್ಪಳ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿ ಕೆ.ಶಿವರಾಮ ನಿಧನ: ಸಂತಾಪ

**ಹಂಪಿ ಟೈಮ್ಸ್ ಕೊಪ್ಪಳ**



ಕೊಪ್ಪಳ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ ಕೆ.ಶಿವರಾಮ್ ಅವರು ನಿಧನಕ್ಕೆ ಕೊಪ್ಪಳ ಜಿಲ್ಲಾಡಳಿತದ ಪರವಾಗಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಗೌರವಪೂರ್ವಕವಾಗಿ ಸಂತಾಪ ಸೂಚಿಸಿದ್ದಾರೆ.

ಕೆ.ಶಿವರಾಮ ಅವರು ಈ ನಾಡು ಕಂಡ ನೆಚ್ಚಿನ ಹಿರಿಯ ಐಎಎಸ್ ಅಧಿಕಾರಿಯಾಗಿದ್ದರು. 1997ರ ಅವಧಿಯಲ್ಲಿ ಅವಿಭಜಿತ ರಾಯಚೂರು ಜಿಲ್ಲೆಯಿಂದ ಕೊಪ್ಪಳವು ಬೇರ್ಪಡೆಯಾಗಿ ನೂತನ ಜಿಲ್ಲೆಯಾಗಿ ಉದಯವಾದಾಗ ಐಎಎಸ್ ಅಧಿಕಾರಿ ಕೆ.ಶಿವರಾಮ ಅವರು ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿ 'ಕೊಪ್ಪಳ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿ' ಎನ್ನುವ ವಿಶೇಷತೆಗೆ ಪಾತ್ರರಾದರು.

ಹಿಂದುಳಿದ ಪ್ರದೇಶ ಎನ್ನುವ ಹಣೆಪಟ್ಟಿ ಹೊತ್ತಿದ ಕೊಪ್ಪಳ ಜಿಲ್ಲೆಯನ್ನು 'ನೂತನ ಜಿಲ್ಲೆ' ಎಂದು ಸರ್ಕಾರವು ಘೋಷಿಸಲ್ಪಟ್ಟಾಗ ಜಿಲ್ಲೆಯ ಜನತೆಗೆ ಸಂಭ್ರಮದ ಜೊತೆಗೆ ಬಹಳಷ್ಟು ನಿರೀಕ್ಷೆಗಳಿರುತ್ತವೆ. ಆ ವೇಳೆ ಕೆ.ಶಿವರಾಮ ಅವರು ಜನರ ಸಂಭ್ರಮದ ಜೊತೆಗೆ ಬೆರೆತು ಹಲವಾರು ಸವಾಲುಗಳನ್ನು ಸಹ ಸಮರ್ಥವಾಗಿ ನಿರ್ವಹಣೆ ಮಾಡಿದ್ದರಿಂದ ಜಿಲ್ಲೆಯಾಗಿ ಘೋಷಣೆಯಾದ ಕೆಲವೇ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯು ಜಿಲ್ಲಾಡಳಿತ ಭವನ ಕಾಣುವಂತಾಗಿದ್ದು ಕೂಡ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿದಿದೆ.

ಕೆ.ಶಿವರಾಮ ಅವರು ದಕ್ಷ ಆಡಳಿತಗಾರಾಗಿದ್ದರು. ಆಡಳಿತ ಮತ್ತು ಸೇವೆಗೆ ಮತ್ತೊಂದು ಹೆಸರು ಕೆ.ಶಿವರಾಮ ಎಂದು ಜನರು ಮಾತನಾಡುವ ಹಾಗೆ ಕಾರ್ಯ ನಿರ್ವಹಿಸಿ ನಾಡಿನಲ್ಲಿ ಉತ್ತಮ ಐಎಎಸ್ ಅಧಿಕಾರಿ ಎನ್ನುವ ಕೀರ್ತಿಗೆ ಪಾತ್ರರಾಗಿದ್ದರು. ಜೀವನಪ್ರೀತಿ ಹಾಗೂ ವಿಶೇಷ ಮಾನವೀಯ ಗುಣಗಳನ್ನು ಹೊಂದಿದ ಅಪರೂಪದ ವ್ಯಕ್ತಿತ್ವ ಅವರದಾಗಿತ್ತು. ನೌಕರ ವರ್ಗದ ಬಗ್ಗೆ ಅಪಾರ ಕಾಳಜಿ ಹೊಂದಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಹಿರಿಯ ಐಎಎಸ್ ಅಧಿಕಾರಿ ಕೆ.ಶಿವರಾಮ ಅವರ ನಿಧನದ ಸುದ್ದಿ ಕೇಳಿ ಕೊಪ್ಪಳ ಜಿಲ್ಲೆಯ ಜನರು ದುಃಖ ವ್ಯಕ್ತಪಡಿಸಿದ್ದಾರೆ. ಕೆ.ಶಿವರಾಮ ಅವರು ಜಿಲ್ಲಾಧಿಕಾರಿಗಳಾಗಿದ್ದ ವೇಳೆ ಸೇವೆಯಲ್ಲಿದ್ದ ಅಧಿಕಾರಿವರ್ಗದವರು ಸಹ ದುಃಖಿತರಾಗಿದ್ದಾರೆ. ಕೊಪ್ಪಳ ಜಿಲ್ಲಾಡಳಿತವು ಗೌರವಪೂರ್ವಕವಾಗಿ ಸಂತಾಪ ತಿಳಿಸುತ್ತದೆ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

# ಮನುಷ್ಯ ಸ್ವಾವಲಂಬಿಯಾಗಿ ಜೀವಿಸಲು ಶಿಕ್ಷಣ ಬಹುಮುಖ್ಯ

### ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾ. ರಾಜೇಶ್.ಎನ್.ಹೊಸಮನಿ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**

ಮನುಷ್ಯನು ಸ್ವಾವಲಂಬಿಯಾಗಿ ಜೀವಿಸಲು ಶಿಕ್ಷಣ ಬಹುಮುಖ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶರಾದ ರಾಜೇಶ್.ಎನ್.ಹೊಸಮನಿ ಅವರು ಅಭಿಪ್ರಾಯ ಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ವಿಮ್ಸ್‌ನ ವೈದ್ಯ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪರಿಶುದ್ಧ ಮನಸುಳ್ಳ ದೇವರ ರೂಪವೇ ಮಕ್ಕಳಾಗಿದ್ದು, ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ಶಿಕ್ಷಣ ಒದಗಿಸುವ ಕಾರ್ಯ ಮಾಡಬೇಕು ಎಂದು ಸಲಹೆ ಮಾಡಿದರು.

ಮಕ್ಕಳನ್ನು ಶಿಕ್ಷಣವಂತರಾಗಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್, ಎ.ಪಿ.ಜೆ ಅಬ್ದುಲ್ ಕಲಾಂ, ಸ್ವಾಮಿ ವಿವೇಕಾನಂದ, ಲಾಲ್ ಬಹದ್ದೂರ್ ಶಾಸ್ತ್ರಿ ಮುಂತಾದ ಮಹಾನ್ ಪುರುಷರ ಜೀವನ ಕಥೆಗಳನ್ನು ಮಕ್ಕಳಿಗೆ ಹೇಳಬೇಕು. ಮಕ್ಕಳಲ್ಲಿ ನಾವೆಲ್ಲರೂ ಒಂದೇ ಎನ್ನುವ ಭಾವನೆ ಮೂಡಿಸಿ, ಸಾಮಾಜಿಕವಾಗಿ ಮಾನಸಿಕವಾಗಿ ಮಗುವನ್ನು ಸಧೃಡರನ್ನಾಗಿ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್. ಕೆ.ಹೆಚ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳ ಪ್ರತಿಭೆ ಅನಾವರಣಗೊಳ್ಳಲು ಇಂತಹ ವೇದಿಕೆಗಳು ಸಹಕಾರಿಯಾಗಿದ್ದು, ಮಕ್ಕಳಲ್ಲಿರುವ ಕಲೆಯನ್ನು ಅನಾವರಣಗೊಳಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಸಂಗೀತ, ನಾಟಕ ಪ್ರದರ್ಶನ, ಜನಪದ ನೃತ್ಯ, ಕಾವ್ಯ, ಕಥೆ, ಚಿತ್ರಕಥೆ, ಕ್ಲೇ ಮಾಡಲಿಂಗ್ ಸ್ಪರ್ಧೆಗಳಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸಿ ಪ್ರದರ್ಶನ ನೀಡಿದರು.

ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವು ಮನರಂಜನೆ ಭರಿತವಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ಕಮಲ್‌ಷಾ ಅಲ್ತಾಪ್ ಅಹಮ್ಮದ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ರಾಮಕೃಷ್ಣ ನಾಯಕ.ಎಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಲಾಲಪ್ಪ, ಜಿಲ್ಲಾ ಮಕ್ಕಳ ರಕ್ಷಣಾ ಯೋಜನಾ ಘಟಕದ ಯೋಜನಾಧಿಕಾರಿ ಮೌನೇಶ್, ಶಿಶು ಯೋಜನಾ ಅಧಿಕಾರಿ ನಾಗರಾಜ.ಪಿ, ನಾಗಪ್ಪ, ಪ್ರದೀಪ್ ಸೇರಿದಂತೆ ಇಲಾಖೆ ವಿವಿಧ ಇಲಾಖೆಗಳ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಪೋಷಕರು ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

# ಮೂರು ದಿನಗಳ ಕೃಷಿ–ಡ್ರೋನ್ ತಂತ್ರಜ್ಞಾನ ಪ್ರಾತ್ಯಕ್ಷಿಕೆ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**




ಬಳ್ಳಾರಿಯ ಐಸಿಎಆರ್–ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣೆ ಸಂಶೋಧನಾ ಕೇಂದ್ರ ವತಿಯಿಂದ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಸೋಮಲಾಪುರ ಗ್ರಾಮ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ರಾಮಸಾಗರ ಗ್ರಾಮ ಮತ್ತು ಬಳ್ಳಾರಿ ತಾಲ್ಲೂಕಿನ ಬೆಳಗಲ್ ತಾಂಡಾ ಗ್ರಾಮದಲ್ಲಿ (ಫೆ.26 ರಿಂದ 28 ರವರೆಗೆ) ಮೂರು ದಿನಗಳ ಕೃಷಿ–ಡ್ರೋನ್ ತಂತ್ರಜ್ಞಾನ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮೊದಲಿಗೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಸೋಮಲಾಪುರ ಗ್ರಾಮದ 20 ಎಕರೆ ಪ್ರದೇಶದಲ್ಲಿ ಬೆಳೆದಿರುವ ತೆಂಗು ಮತ್ತು ಮಾವು ಬೆಳೆಗಳಿಗೆ ಡ್ರೋನ್ ಪ್ರಾತ್ಯಕ್ಷಿಕ ಸಿಂಪಡಣೆಯನ್ನು ಮಾಡಲಾಯಿತು. ಮಹೋಗಾನಿ, ರೆಡ್–ಸ್ಯಾಂಡರ್ಸ್ ಮತ್ತು ಕ್ಯಾಸುರಿನಾ ಮರಗಳನ್ನು ಸಹ ಆ ಪ್ರದೇಶದಲ್ಲಿ ಬೆಳೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕರಡಿಹಳ್ಳಿಯಲ್ಲಿ 5 ಎಕರೆ ಶೇಂಗಾ ಬೆಳೆಗೆ ಸಿಂಪಡಣೆಯನ್ನು ಮಾಡಲಾಯಿತು.

ಬಳಿಕ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ರಾಮಸಾಗರ ಗ್ರಾಮದಲ್ಲಿ 22 ಎಕರೆ ಶೇಂಗಾ ಬೆಳೆಗೆ ಹಾಗೂ 3 ಎಕರೆ ಮೆಕ್ಕೆಜೋಳದ ಬೆಳೆಗೆ ಪ್ರಾತ್ಯಕ್ಷಿಕ ಸಿಂಪಡಣೆಯನ್ನು ಮಾಡಲಾಯಿತು. ನಂತರದಲ್ಲಿ ಬಳ್ಳಾರಿ ತಾಲ್ಲೂಕಿನ ಬೆಳಗಲ್ ತಾಂಡಾ ಗ್ರಾಮದಲ್ಲಿ 6 ಎಕರೆ ಶೇಂಗಾ ಬೆಳೆಗೆ ಮತ್ತು 4 ಎಕರೆ ಕರಿಬೇವಿನ ಬೆಳೆಗೆ ಪ್ರಾತ್ಯಕ್ಷಿಕ ಸಿಂಪಡಣೆಯನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಐಸಿಎಆರ್–ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣೆ, ಸಂಶೋಧನಾ ಕೇಂದ್ರದ ಮುಖ್ಯಸ್ಥರಾದ ಡಾ.ಬಿ.ಕೃಷ್ಣ ರಾವ್ ಮಾತನಾಡಿ, ಕೃಷಿ–ಡ್ರೋನ್ ಸಿಂಪಡಣೆಯು ಬೆಳೆಗಳಿಗೆ ರಾಸಾಯನಿಕಗಳನ್ನು ಸಿಂಪಡಿಸಲು ಬೇಕಾಗುವ ಕಾರ್ಮಿಕರನ್ನು ಕಡಿಮೆ ಮಾಡುತ್ತದೆ. ಕೇಂದ್ರೀಕೃತ ರಾಸಾಯನಿಕವನ್ನು ನಿಖರವಾಗಿ ಸಿಂಪಡಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೈತರು ಹೆಚ್ಚಿನ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಒತ್ತಾಯಿಸಿದರು.

ಈ ಹಳ್ಳಿಗಳಲ್ಲಿ, ಡ್ರೋನ್ ಬಾಡಿಗೆಗೆ ಪಡೆದು, ಶೇಂಗಾ ಬೆಳೆಗೆ ಸೂಕ್ಷ್ಮ ಪೋಷಕಾಂಶಗಳನ್ನು ಹೆಚ್ಚಿನ ಪ್ರದೇಶಗಳಲ್ಲಿ ಸಿಂಪಡಿಸಲು ಪ್ರೇರೇಪಿತರಾಗಿದ್ದಾರೆ. ಭಾಗವಹಿಸಿದ ಅನೇಕ ರೈತರು ಡ್ರೋನ್‌ನ ಬೆಲೆಯನ್ನು ಕೇಳಿದರು ಮತ್ತು ಅವರಲ್ಲಿ ಕೆಲವರು ಮುಂಬರುವ ವರ್ಷಗಳಲ್ಲಿ ಡ್ರೋನ್ ಖರೀದಿಸಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸೋಮಲಾಪುರ, ಕರಡಿಹಳ್ಳಿ, ರಾಮಸಾಗರ, ರಾಂಪುರ, ಬೆಳಗಲ್ ತಾಂಡಾ, ಚೆಳ್ಳಗುರ್ಕಿ, ಚಾಗನೂರು ಗ್ರಾಮಗಳ ಸುಮಾರು ಎಪ್ಪತ್ನಾಲ್ಕು ರೈತರು ಭಾಗವಹಿಸಿದ್ದರು.

## ಕೊಟ್ಟೂರು ನಗರ ಘಟಕದ ಎಸ್ ಸಿ ಮೋರ್ಚಾ ಅಧ್ಯಕ್ಷರಾಗಿ ಎಲ್.ವಿಷ್ಣು ನೇಮಕ

**ಹಂಪಿ ಟೈಮ್ಸ್ ಕೊಟ್ಟೂರು**

ಭಾರತೀಯ ಜನತಾ ಪಾರ್ಟಿಯ ಕೊಟ್ಟೂರು ಮಹಾಶಕ್ತಿ ಕೇಂದ್ರ ನಗರ ಘಟಕದ ಎಸ್ ಸಿ ಮೋರ್ಚಾ ಅಧ್ಯಕ್ಷರನ್ನಾಗಿ ಎಲ್.ವಿಷ್ಣು ಅವರನ್ನು ಬಿಜೆಪಿ ನಗರ ಘಟಕ ಅಧ್ಯಕ್ಷ ಭರಮನಗೌಡ ನೇಮಕ ಮಾಡಿ, ಮಾತನಾಡಿದರು. ಯಾರೊಬ್ಬರೂ ಪಕ್ಷದ ಅಧಿಕಾರಕ್ಕೆ ಅಂಟಿಕೊಳ್ಳದೆ ಪಕ್ಷದ ಬಲವರ್ಧನೆಗೆ ಶ್ರಮಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕದ ಉಪಾಧ್ಯಕ್ಷರು ಪಂಪಾಪತಿ ಅಂಗಡಿ, ಕಾರ್ಯಕಾರಿಣಿ ಸದಸ್ಯ ಮಣಿಕಂಠ, ಎಸ್. ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪೂಜಾರ್ ಕರಿಬಸವರಾಜ್, ಯುವ ಮುಖಂಡರಾದ ಸೋಮು, ಹುಲಿಗೇಶ್, ರೋಹಿತ್, ರಮೇಶ್ ಪ್ರಸಾದ್,ಅಂಜಿನಿ, ನಿಂಗರಾಜು, ಶೇಖರ್, ಮನು, ಭರತ್, ವೀರೇಶ್, ಗಿರಿ, ಶಿವು ಸೇರಿದಂತೆ ಯುವಕರು ಇದ್ದರು.

## ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರ ನೂತನ ಕಚೇರಿ ಉದ್ಘಾಟನೆ



**ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು, ಇಂದು ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ 'ಸಿ' ಬ್ಲಾಕ್‌ನ ಮೊದಲ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 49 ರಲ್ಲಿನ ತಮ್ಮ ನೂತನ ಕಚೇರಿಯನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆ ಮೇಯರ್ ಬಿ.ಶ್ವೇತ, ಉಪಮೇಯರ್ ಬಿ.ಜಾನಕಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಹಾಯಕ ಆಯುಕ್ತ ಹೇಮಂತ್.ಎನ್., ಡಿಎಂಎಫ್ ವಿಶೇಷಾಧಿಕಾರಿ ಪಿ.ಎಸ್.ಮಂಜುನಾಥ, ತಹಶೀಲ್ದಾರ ಗುರುರಾಜ ಸೇರಿದಂತೆ ಪಾಲಿಕೆಯ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ಕನಕದುರ್ಗಮ್ಮ ದೇವಸ್ಥಾನ ಸಿಡಿಬಂಡಿ ಮಹೋತ್ಸವ ಅದ್ದೂರಿ ಆಚರಣೆ : ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ




**ಹಂಪಿ ಟೈಮ್ಸ್ ಬಳ್ಳಾರಿ**

ಬರುವ ಮಾ.19 ರಂದು ನಡೆಯಲಿರುವ ಶ್ರೀ ಕನಕದುರ್ಗಮ್ಮ ದೇವಸ್ಥಾನದ ಸಿಡಿಬಂಡಿ ರಥೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ವಹಿಸಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಸೂಚಿಸಿದರು.

ಶ್ರೀ ಕನಕದುರ್ಗಮ್ಮ ದೇವಸ್ಥಾನದ ಸಿಡಿಬಂಡಿ ಮಹೋತ್ಸವ ಅಂಗವಾಗಿ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಅಧಿದೇವತೆಯ ಮಹೋತ್ಸವವನ್ನು ಸಂಪ್ರದಾಯದಂತೆ ಆಚರಣೆಗೆ ಕ್ರಮ ವಹಿಸಬೇಕು. ಶಿಷ್ಠಾಚಾರದಂತೆ ಎಲ್ಲಾರಿಗೂ ಆಹ್ವಾನಿಸಬೇಕು. ರಥ ಚಕ್ರಗಳನ್ನು ಪರಿಶೀಲಿಸಬೇಕು. ಯಾವುದೇ ರೀತಿಯ ಲೋಪವಾಗದಂತೆ ನೋಡಿಕೊಳ್ಳಬೇಕು ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ದೇವಸ್ಥಾನದ ನೈರ್ಮಲೀಕರಣಕ್ಕೆ ದೇವಸ್ಥಾನದ ಸುತ್ತಲು ಜಾತ್ರಾ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹಾಗೂ ಕಸದ ವಿಲೇವಾರಿಯ ಕುರಿತು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿದರು.

ರಥೋತ್ಸವ ಕಾರ್ಯಕ್ರಮದಲ್ಲಿ ಸುಮಾರು 3 ರಿಂದ 4 ಲಕ್ಷ ಜನರು ಸೇರುವ ಸಾಧ್ಯತೆ ಇದೆ. ಬರುವ ಸಾರ್ವಜನಿಕರು ಮತ್ತು ಭಕ್ತಾಧಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಪೊಲೀಸ್ ಬಂದೋಬಸ್ತ್ ನಿಯೋಜಿಸುವಂತೆ ತಿಳಿಸಿದರು.

ಆರೋಗ್ಯದ ವಿಚಾರ ಸಂಬಂಧಿಸಿದಂತೆ ವೈದ್ಯಾಧಿಕಾರಿಗಳ ತಂಡವನ್ನು ರಚಿಸಿ, ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಬೇಕು. ಸಹಾಯವಾಣಿ ಕೇಂದ್ರ ತೆರೆಯಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅಗ್ನಿಶಾಮಕದಳ ಸೇವೆ, ಸಾರ್ವಜನಿಕರು ಮತ್ತು ಭಕ್ತಾಧಿಗಳಿಗೆ ಸಾಲಿನಲ್ಲಿ ಬಂದು ದೇವಿಯ ದರ್ಶನ ಪಡೆಯಲು ಬ್ಯಾರಿಕೇಡ್ ಮತ್ತು ಸಿಸಿಟಿವಿ ಕ್ಯಾಮೆರಗಳನ್ನು ಅಳವಡಿಸಬೇಕು ಎಂದು ಹೇಳಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮಾತನಾಡಿ, ಸಿಡಿಬಂಡಿ ರಥೋತ್ಸವದ ಅಂಗವಾಗಿ ನಗರದ ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ ವ್ಯವಸ್ಥೆ ಮಾಡಬೇಕು. ದೇವಿಯ ದರ್ಶನಕ್ಕೆ ಬರುವ ವಿಐಪಿ ವ್ಯಕ್ತಿಗಳಿಗೆ ನಿಗದಿತ ಸಮಯ ಮೀಸಲಿರಿಸಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂದು ಸಲಹೆ ನೀಡಿದರು.

ಮೋಕಾ ಮುದಿಮಲ್ಲೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವ:

ಬಳ್ಳಾರಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಮೋಕಾ ಗ್ರಾಮದ ಮುದಿ ಮಲ್ಲೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವೂ ಮಾ.02 ರಂದು ನಡೆಯಲಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಇದಕ್ಕೆ ಅಗತ್ಯ ಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಇದೇ ಸಂದರ್ಭದಲ್ಲಿ ಸೂಚಿಸಿದರು.

ಈ ವೇಳೆ ಮಹಾನಗರ ಪಾಲಿಕೆ ಮೇಯರ್ ಬಿ.ಶ್ವೇತ, ಉಪಮೇಯರ್ ಬಿ.ಜಾನಕಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಸಹಾಯಕ ಆಯುಕ್ತ ಹೇಮಂತ್, ತಹಶೀಲ್ದಾರ ಗುರುರಾಜ, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ, ಗಾಣಿಗ ಸಮುದಾಯದವರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಮಹಾನಗರ ಪಾಲಿಕೆ ಸದಸ್ಯರುಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA